
ನವಸಾಕ್ಷರ ಪುಸ್ತಕ ಮಾಲೆ ೧೦೮

ಹುಡುಕಾಟ

ಡಾ॥ ಎಚ್.ಎಸ್. ರಾಘವೇಂದ್ರ ರಾವ್



ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನವಸಾಕ್ಷರ ಪುಸ್ತಕ ಮಾಲೆ

ಲೋಕಶಿಕ್ಷಣ ನಿರ್ದೇಶನಾಲಯ

ನವಸಾಕ್ಷರ ಪುಸ್ತಕ ಮಾಲೆ - ೧೦೮

ಹುಡುಕಾಟ

ಡಾ. ಎಚ್. ಎಸ್. ರಾಘವೇಂದ್ರ ರಾವ್

ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ-೫೮೩ ೨೧೧

HUDUKATA : By Dr. H. S. Raghavendra Rao. Published by The Director of Prasaranga, Kannada University, Hampi - 583 211, KARNATAKA.
First Impression 1994, Pp. i i + 26, Rs. 8.00.

ಸಂಯೋಜನಾಧಿಕಾರಿ
ಡಾ. ಎಚ್. ಎಸ್. ಶ್ರೀಮತಿ
ಪಠ್ಯ ಪುಸ್ತಕ ರಚನಾ ವಿಭಾಗ

ಪ್ರಕಾಶಕರು
ನಿರ್ದೇಶಕರು
ಪ್ರಸಾರಾಂಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ - ೫೮೩ ೨೧೧

ಮುಖಪುಟ ವಿನ್ಯಾಸ
ಕೆ. ಮಕಾಳಿ

ಬೆಲೆ : ರೂ. ೮.೦೦

ಮುದ್ರಕರು
ಬೃಂದಾವನ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಪ್ರೈ.ಲಿ.
೧೨/೧೩, ಲಾಲ್‌ಬಾಗ್ ಫೋರ್ಟ್ ರಸ್ತೆ,
ಬೆಂಗಳೂರು – ೫೬೦ ೦೦೪.

ಹುಡುಕಾಟ

ಏನು, ಯಾರು, ಯಾಕೆ, ಹೇಗೆ?

ಇಂದು ಈ ಲೋಕದಲ್ಲಿ ಬದುಕಿರುವ ಜನರಲ್ಲಿ ಯಾರೂ ಇನ್ನು ನೂರು ವರ್ಷ ಆದ ಮೇಲೆ ಬದುಕಿರುವುದಿಲ್ಲ. ಹಾಗೆಯೇ ನೂರು ವರ್ಷದ ಹಿಂದೆ ಇದ್ದವರು ಈಗ ಇಲ್ಲ. ಇದೇ ರೀತಿ ಹಿಂದೆ ಹೋದರೆ, ಭೂಮಿಯ ಮೇಲೆ ಮನುಷ್ಯರು ಇಲ್ಲದ ಕಾಲ ಒಂದಿತ್ತು. ಮನುಷ್ಯಪ್ರಾಣಿ ಇಲ್ಲದೇ ಹೋಗುವ ಕಾಲ ಕೂಡ ಎಂದೋ ಒಂದು ದಿನ ಬರಬಹುದು. ಮೊದಲನೆಯ ಮನುಷ್ಯ ಕಾಣಿಸಿಕೊಂಡ ದಿನದಿಂದ ಹಿಡಿದು, ಕೊನೆಯ ಮನುಷ್ಯನ ಕೊನೆಯ ದಿನದವರೆಗಿನ ಕಾಲದಲ್ಲಿ ಅವನ ಚರಿತ್ರೆ ಹರಡಿಕೊಂಡಿದೆ.

ಈ ಅವಧಿಯಲ್ಲಿ ಅವನ ಜೀವನವು ಅನೇಕ ಬದಲಾವಣೆಗಳನ್ನು ಕಂಡಿದೆ. ಅವನು ಎದುರಿಸುತ್ತಿದ್ದ ಅನೇಕ ತೊಂದರೆಗಳು ಕಡಿಮೆಯಾಗಿವೆ. ಅವುಗಳ ಬದಲು ಹೊಸ ಕಷ್ಟಗಳು ಕಾಣಿಸಿಕೊಂಡಿವೆ. ಕೆಲವು ಕಷ್ಟಗಳನ್ನು ತಪ್ಪಿಸಿಕೊಳ್ಳಲು ಅವನಿಗೆ ಆಗುವುದಿಲ್ಲ. ಸಾವು, ನೋವು, ರೋಗ, ಬರಗಾಲ ಈ ರೀತಿಯ ಕಷ್ಟಗಳು. ಬೇರೆ ಕೆಲವು ತೊಂದರೆಗಳಿಗೆ ಮನುಷ್ಯನೇ ಕಾರಣ. ಬಡತನ, ಯುದ್ಧ, ಜಾತಿ, ಮೋಸ, ಸುಲಿಗೆಗಳು ಇಂಥ ತೊಂದರೆಗಳು.

ಮನುಷ್ಯನು ಬದುಕುವ ರೀತಿಯಲ್ಲಿ ಬದಲಾವಣೆಗಳಾಗಿವೆ. ಆದರೆ ಪ್ರಾಣಿಗಳು, ಪಕ್ಷಿಗಳು ಬದುಕುವ ಬಗೆಯಲ್ಲಿ ಏನೂ ಹೆಚ್ಚಿನ ಅಂತರ ಕಾಣಿಸುವುದಿಲ್ಲ. ಒಂದು ಕಾಗೆ, ಒಂದು ನರಿ ಎಂದಿನಂತೆಯೇ ಇಂದೂ ಇವೆ. ಅವುಗಳ ಕಷ್ಟ ಅಥವಾ ಸುಖ ಜಾಸ್ತಿ ಆಗಿದ್ದರೆ ಅದಕ್ಕೂ ಮನುಷ್ಯನೇ ಕಾರಣ. ಹೀಗೆ ತನ್ನ ಸುತ್ತ ಇರುವ ಜಗತ್ತನ್ನು ತನಗೆ ಅನುಕೂಲವಾಗುವಂತೆ ಬದಲಾಯಿಸಿಕೊಳ್ಳುವ, ಉಪಯೋಗಿಸುವ ಶಕ್ತಿ ಅವನಿಗೆ ಇದೆ. ಈ ಶಕ್ತಿ ಬರಲು ಅವನ ಬುದ್ಧಿಯೇ ಕಾರಣ. ಮನುಷ್ಯ ಎಲ್ಲಕ್ಕಿಂತ ಜಾಣನಾದ ಪ್ರಾಣಿ. ಆ ಜಾಣತನದ ಜೊತೆಗೆ ಅವನಿಗೆ ಹುಡುಕಾಟದ ಗುಣ ಇದೆ.

ಮನುಷ್ಯ ಈ ಪ್ರಪಂಚದಲ್ಲಿ ಅನೇಕ ವಿಷಯಗಳನ್ನು ನೋಡುತ್ತಾನೆ. ಏನು? ಏಕೆ? ಹೇಗೆ? ಯಾರು? ಎಂದು ಕೇಳುತ್ತಾನೆ. ಉತ್ತರಗಳನ್ನು ಹುಡುಕುತ್ತಾನೆ. ತನಗೆ ಗೊತ್ತಾದ ಉತ್ತರವನ್ನು ಬೇರೆಯವರಿಗೆ ಹೇಳುತ್ತಾನೆ. ಅವರಿಗೆ ಗೊತ್ತಿರುವುದನ್ನು ತಿಳಿದುಕೊಳ್ಳುತ್ತಾನೆ. ಮಾತು ಮತ್ತು ಬರವಣಿಗೆ ಎಂಬ ಎರಡು ವಿಷಯಗಳಿಂದ ತಿಳುವಳಿಕೆಯನ್ನು ಹಂಚಿಕೊಳ್ಳಲು ಅವನಿಗೆ ಸಾಧ್ಯವಾಗುತ್ತದೆ. ಅವನ ಹುಡುಕಾಟ ನಡೆದಿರುವ ಕೆಲವು ದಿಕ್ಕುಗಳನ್ನು ಈ ಪುಸ್ತಕದಲ್ಲಿ ತಿಳಿದುಕೊಳ್ಳೋಣ.

ನಾನುಂಟೋ ಮೂರು ಲೋಕ ಉಂಟೋ

ಎಲ್ಲರೂ ಸುಖವಾಗಿರಲು ಇಷ್ಟಪಡುತ್ತಾರೆ. ಮಳೆ, ಗಾಳಿ, ಬೆಂಕಿ, ಬಿಸಿಲು, ಪಕ್ಷಿ, ಪ್ರಾಣಿ, ಇವುಗಳಿಂದ ಉಂಟಾಗುವ ಅಪಾಯದಿಂದ ತಪ್ಪಿಸಿಕೊಳ್ಳಲು ಬಯಸುತ್ತಾರೆ. ಮೊದಲು ಮನುಷ್ಯನಿಗೆ ಈ ಶಕ್ತಿಗಳ ಮೇಲೆ ಯಾವ ಹಿಡಿತವೂ ಇರಲಿಲ್ಲ. ಆದರೆ ಕಾಲ ಕಳೆದಂತೆ ಅವನು ಬೆಂಕಿಯಿಂದ ಆಹಾರವನ್ನು ಬೇಯಿಸಲು ಕಲಿತ. ಹರಿಯುವ ನದಿಯನ್ನು ನಿಲ್ಲಿಸಿ ಬೇಸಾಯ ಮಾಡಿದ. ಪ್ರಾಣಿಗಳ ಹಾಲು ಕುಡಿದ, ಅವುಗಳ ಮೇಲೆ ಸವಾರಿ ಮಾಡಿದ. ಅವುಗಳ ಚರ್ಮದಿಂದ, ಉಣ್ಣೆಯಿಂದ ಬಟ್ಟೆ, ಕಂಬಳಿ ಮಾಡಿಕೊಂಡ. ಜೇನುಹುಳುಗಳು ಕೂಡಿಟ್ಟ ಆಹಾರವನ್ನು ತಾನು ತೆಗೆದುಕೊಂಡ. ರೇಶಿಮೆಹುಳುಗಳ ಗೂಡನ್ನು ಬೇಯಿಸಿ ದಾರ ತೆಗೆದ. ಎಲ್ಲ ಸಸ್ಯಗಳೂ ಪ್ರಾಣಿಗಳೂ ತನ್ನ ಉಪಯೋಗಕ್ಕಾಗಿ, ಅನುಕೂಲಕ್ಕಾಗಿ ಇವೆ ಎನ್ನುವಂತೆ ನಡೆದುಕೊಂಡ.

ಈಗ ಯಾವ ಪ್ರಾಣಿಗೂ ಅವನು ಹೆದರುವುದಿಲ್ಲ. ಆದರೆ ಅವನು ತನ್ನ ಹಾಗೆಯೇ ಇರುವ ಮನುಷ್ಯರಿಗೆ ಹೆದರಬೇಕಾಗಿ ಬಂದಿದೆ. ಈಗ ಮನುಷ್ಯರೇ ಮನುಷ್ಯರ



ಮಾನವನ ನಿರಂತರ ಹುಡುಕಾಟ

ಬೇಟೆ ಆಡುತ್ತಾರೆ. ಒಬ್ಬರನ್ನು ಇನ್ನೊಬ್ಬರು ಕೊಲ್ಲುತ್ತಾರೆ. ಇದು ಕಣ್ಣಿಗೆ ಕಾಣುವಂತೆ ನಡೆದರೆ ಕೊಲೆ ಎನ್ನುತ್ತೇವೆ. ರಾಜಕಾರಣಿಗಳ ಅಪ್ಪಣೆಯಂತೆ ನಡೆದರೆ ಯುದ್ಧ ಎನ್ನುತ್ತೇವೆ. ಜಾಣತನದಿಂದ ಅದೇ ಕೆಲಸ ಮಾಡಿದರೆ ವ್ಯಾಪಾರ ಎನ್ನುತ್ತೇವೆ.

ಜೀವವಿಲ್ಲದ ಸಂಗತಿಗಳನ್ನು ಗೆಲ್ಲುವ ಕೆಲಸ ಕೂಡ ಹೀಗೆಯೇ. ಕಾಡಿನ ಮರಗಳು ನಮಗೆ ಬೇಕು. ಸರಿ, ಹಿಂದೆ ಮುಂದೆ ಯೋಚನೆ ಮಾಡದೆ ಸಾವಿರಗಟ್ಟಲೆ ಎಕರೆ ಕಾಡನ್ನು ಕಡಿದು, ಕಡಿದು ಹಾಕುತ್ತೇವೆ. ಕಾಡು ಇಲ್ಲದೆ ಮಳೆ ಕಡಿಮೆಯಾದರೆ ಕಣ್ಣುಕಣ್ಣು ಬಿಡುತ್ತೇವೆ. ನದಿಯ ನೀರಿಗೆ ಅಣೆಕಟ್ಟು ಕಟ್ಟುವಾಗ ಸುತ್ತ ಇರುವ ಕಾಡಿಗೆ, ಜನರಿಗೆ ಏನಾಗುತ್ತಿದೆ ಎಂದು ಯೋಚನೆ ಮಾಡುವುದಿಲ್ಲ. ನಾವು ಬೆಳೆಯುವ

ಕಾಳು-ಕಡ್ಡಿಯನ್ನು, ಹಣ್ಣು-ತರಕಾರಿಯನ್ನು ಒಂದೇ ಒಂದು ಹಕ್ಕಿ, ಹುಳ ತಿನ್ನುವುದು ಕೂಡ ನಮಗೆ ಸರಿಬರುವುದಿಲ್ಲ. ಗಿಡಗಳ ಮೇಲೆ ವಿಷ ತುಂಬಿದ ಔಷಧಗಳನ್ನು ಚಿಮುಕಿಸುತ್ತೇವೆ. ಹುಳ-ಹುಪ್ಪಟೆ ಸಾಯುತ್ತವೆ. ನಂತರ ಆ ಕಾಳನ್ನು, ತರಕಾರಿಯನ್ನು, ಹಣ್ಣನ್ನು ತಿಂದ ಮನುಷ್ಯರ ಆರೋಗ್ಯವೂ ಕೆಡುತ್ತದೆ. ನಾನುಂಟೋ ಮೂರು ಲೋಕ ಉಂಟೋ ಎಂದು ನಾವು ಯೋಚಿಸಿದರೆ ಮೂರು ಲೋಕವೂ ಹಾಳಾಗುತ್ತದೆ, ನಾವೂ ನಾಶವಾಗುತ್ತೇವೆ.

ಇಬ್ಬರು ರಾಜರ ಕಥೆಗಳು

ಸುಖದ ಈ ಹುಡುಕಾಟ ಒಂದು ತಮಾಷೆಯ ಸಂಗತಿ. ಏಕೆಂದರೆ ನಮಗೆ ಸುಖ ಎಂದರೆ ಏನು ಎನ್ನುವುದೇ ಸರಿಯಾಗಿ ಗೊತ್ತಿಲ್ಲ. ಮಾರುಕಟ್ಟೆಯಲ್ಲಿಸಿಗುವ ಬೇರೆ ಬೇರೆ ಸಾಮಾನುಗಳನ್ನು ಕೊಂಡುಕೊಂಡರೆ, ಉಪಯೋಗಿಸಿದರೆ ಅದೇ ಸುಖ, ಆನಂದ ಎಂದುಕೊಳ್ಳುತ್ತೇವೆ. ಆ ವಸ್ತುಗಳನ್ನು ಮಾರುವವರು ಹಾಗೆ ಹೇಳುತ್ತಾರೆ. ನಾವು ನಂಬುತ್ತೇವೆ. ನಡೆದುಕೊಂಡು ಹೋಗುವುದರ ಬದಲು ಕಾರಿನಲ್ಲಿ ಹಾರಿದರೆ ಅದು ಸುಖ. ದುಡಿದು ಸುರಿಸುವ ಬೆವರಿಗಿಂತ, ದುಡಿಯದೆ ಬೆಳೆಸುವ ಹೊಟ್ಟೆ ಸುಖ. ಕೆಲವರಿಗಂತೂ, ಹೊಟ್ಟೆಗೆ ಹಿಟ್ಟು ಇಲ್ಲದಿದ್ದರೂ ಪರವಾಗಿಲ್ಲ. ಬ್ಯಾಂಕಿನಲ್ಲಿ ಇರುವ ಹಣ ಹೆಚ್ಚಾಗುತ್ತಿದ್ದರೆ ಅದೇ ಸುಖ.

ಒಂದು ಮಾತಿನಲ್ಲಿ ಹೇಳುವುದಾದರೆ ನಮಗಿರುವ ಸುಖದ ಮಾದರಿಗಳು ನಮ್ಮವು ಅಲ್ಲವೇ ಅಲ್ಲ. ಅವು ನಮ್ಮ ಸುತ್ತಲಿನ ಸಮಾಜ ನಮಗೆ ಕೊಟ್ಟವು. ಇಂದಿನ ಸಮಾಜ ಒಬ್ಬರೊಡನೆ ಒಬ್ಬರು ಮೇಲಾಟ ನಡೆಸುವುದನ್ನು ಹೇಳಿಕೊಡುತ್ತದೆ. ನಮ್ಮ ಜೊತೆಯ ಮನುಷ್ಯರ ಜೊತೆಯಲ್ಲಿ ನಾವು ಹೋರಾಟ ನಡೆಸಬೇಕು ಎನ್ನುತ್ತದೆ. ಈ ಕುಸ್ತಿಯಲ್ಲಿ ಗೆದ್ದವನು ಜಾಣ, ಯೋಗ್ಯ. ಸೋತವನು ಕೈಲಾಗದವನು. ಹೀಗೆ ಗೆದ್ದ ಮನುಷ್ಯ ಅದು ಬೇಕು, ಇದು ಬೇಕು ಎಂದು ಕೂಡಿ ಹಾಕಲು ತೊಡಗುತ್ತಾನೆ. ಹೀಗೆ ಕೂಡಿಹಾಕುವ ಆತುರದಲ್ಲಿ ನಿಜವಾಗಿಯೂ ಸಂತೋಷ ಕೊಡುವ ಪ್ರೀತಿ, ಸ್ನೇಹ, ನಗು ಎಲ್ಲವನ್ನೂ ಮರೆಯುತ್ತಾನೆ.

ಮೈದಾಸ್ ಇಂತಹುದೇ ಒಬ್ಬ ರಾಜ. ಅವನು ದೇವರನ್ನು ಕುರಿತು ತಪಸ್ಸು ಮಾಡುತ್ತಾನೆ. ತಾನು ಮುಟ್ಟಿದ್ದು ಎಲ್ಲ ಬಂಗಾರ ಆಗಬೇಕು ಎಂದು ವರ ಕೇಳುತ್ತಾನೆ.



ಮೈದಾಸನ ಊಟವೆಲ್ಲಾ "ಚಿನ್ನ"

ದೇವರು ವರ ಕೊಡುತ್ತಾನೆ. ಇವನು ಅದನ್ನು ಮುಟ್ಟಿ, ಇದನ್ನು ಮುಟ್ಟಿ ಬಂಗಾರದ ರಾಶಿಯನ್ನೇ ಮಾಡಿಕೊಳ್ಳುತ್ತಾನೆ. ಕೊನೆಗೆ ಚಿನ್ನದ ರಾಶಿಯ ನಡುವೆ ಊಟ ಮಾಡಲು ಕುಳಿತುಕೊಳ್ಳುತ್ತಾನೆ. ರೊಟ್ಟಿ ತಿನ್ನಲು ತೆಗೆದುಕೊಂಡರೆ ಅದು ಹೊಳೆಹೊಳೆಯುವ ಬಂಗಾರ ಆಗುತ್ತದೆ. ತಿನ್ನುವ ಅನ್ನ ಚಿನ್ನವಾಗುತ್ತದೆ. ಕುಡಿಯುವ ನೀರು, ಬಂಗಾರದ ನೀರಾಗುತ್ತದೆ. ಹತ್ತಿರ ಬಂದ ಮುದ್ದು ಮಗಳಿಗೆ ಮುತ್ತು ಕೊಟ್ಟರೆ ಅವಳು ಬಂಗಾರದ ಗೊಂಬೆ ಆಗುತ್ತಾಳೆ. ಮೈದಾಸ್ ಪಾಠ ಕಲಿಯುತ್ತಾನೆ.

ಇನ್ನೊಬ್ಬ ರಾಜನ ಕತೆಯನ್ನು ಒಂದು ಕನ್ನಡ ಪದ್ಯ ಚೆನ್ನಾಗಿ ಹೇಳುತ್ತದೆ. ಅದು ಎ.ಕೆ. ರಾಮಾನುಜನ್ ಅವರು ಬರೆದ ಪದ್ಯ. 'ಆ ಹಕ್ಕಿ ಬೇಕಾದರೆ' ಎಂದು ಅದರ ಹೆಸರು.


ಮಂಗೋಲಿಯದಲ್ಲಿ ಒಬ್ಬ ರಾಜ ಇದ್ದನಂತಲ್ಲ
ಅವನು ಯಾವುದೋ
ದೂರದೇಶಕ್ಕೆ ದಂಡೆತ್ತಿ ಹೋದಾಗ
ಅಲ್ಲೊಂದು ಹೊಸ ಹಕ್ಕಿ ಹಾಡು ಕೇಳಿಸಿ
ಆ ಹಾಡು ನನಗೆ ಬೇಕು ಎಂದು
ಹಾಡಿಗೆಂದು ಹಕ್ಕಿ ಹಿಡಿದು
ಹಕ್ಕಿಯ ಜೊತೆ ಗೂಡೆತ್ತಿ
ಗೂಡಿನಡಿ ರೆಂಬೆ
ರೆಂಬೆಗೆ ಕೊಂಬೆ
ಕೊಂಬೆಗೆ ಮರ
ಮರದಡಿಯ ಬೇರು
ಬೇರು ಸುತ್ತಿನ ಹೆಂಟೆ ಮಣ್ಣು
ಆ ಊರು
ನೀರು
ಹಿಂಗಾರು
ಆ ಪ್ರದೇಶ
ದೇಶ
ಆ ಇಡೀ ರಾಜ್ಯ
ಎಲ್ಲ ಹೊತ್ತು ಹಾಕಬೇಕು
ಎನ್ನಿಸಿ
ಇದ್ದಬದ್ದ ಆನೆ ಕುದುರೆ ರಥ
ಸೈನ್ಯ ಎಲ್ಲ ಕೂಡಿಸಿ
ಇಡೀ ರಾಜ್ಯವನ್ನೆಲ್ಲ ಗೆದ್ದು
ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಂಡು
ಮನೆಗೇ ಹೋಗಲಿಲ್ಲ

ಹೌದು. ನಾವು ಕೂಡ ಈ ರಾಜನ ಹಾಗೆಯೇ. ದೂರದಿಂದ ಹಕ್ಕಿಯ ಹಾಡು ಕೇಳಿ ಸಂತೋಷಪಡುವುದಿಲ್ಲ. ಬದಲಾಗಿ ಎಲ್ಲವೂ ನಮ್ಮ ಆಸ್ತಿ ಆಗಬೇಕು ಎಂದು ಆಸೆ ಪಡುತ್ತೇವೆ. ಮನೆಗೆ ಹೋಗುವುದನ್ನು ಮರೆಯುತ್ತೇವೆ. ಹೆಂಡತಿ, ಮಕ್ಕಳ, ತಾಯಿ-ತಂದೆಯರ ಪ್ರೀತಿಯನ್ನು ಕಳೆದುಕೊಳ್ಳುತ್ತೇವೆ.

ಇಂಥ ಕಡೆ ನಮ್ಮ ಹುಡುಕಾಟ ತಪ್ಪು ದಿಕ್ಕಿನಲ್ಲಿ ನಡೆದಿರುತ್ತದೆ.

ಕನಸು ಕಂಡವರು ಕೊಟ್ಟ ವರಗಳು

ನಮ್ಮ ಲೋಕದ ಬೇರೆ ಕೆಲವು ಜಾಣರು. ಯಾವಾಗಲೂ ಏನು, ಏಕೆ, ಹೇಗೆ ಎಂಬ ಪ್ರಶ್ನೆಗಳನ್ನು ಕೇಳುತ್ತಿರುತ್ತಾರೆ. ನಮಗೆಲ್ಲ, ತಾವಾಗಿಯೇ ಸಿಗುವ ವಸ್ತುಗಳನ್ನು ಅನುಭವಿಸುವುದು ಗೊತ್ತು. ಇವರಿಗೆ ಹಾಗಲ್ಲ. ಇವರು ರೋಗದಿಂದ ನರಳುತ್ತಿರುವ



ಶಸ್ತ್ರ ಚಿಕಿತ್ಸೆ

ಒಬ್ಬ ಮನುಷ್ಯನನ್ನು ನೋಡಿದರೆ, ಈ ರೋಗ ಏಕೆ ಬಂತು ಎಂದು ಕೇಳಿಕೊಳ್ಳುತ್ತಾರೆ. ರೋಗದ ಲಕ್ಷಣಗಳನ್ನು ಪರೀಕ್ಷೆ ಮಾಡುತ್ತಾರೆ. ಯಾವ ಔಷಧವನ್ನು ಎಷ್ಟು ಕೊಟ್ಟರೆ ಯಾವಾಗ ರೋಗ ಗುಣವಾಗುತ್ತದೆ ಎಂದು ಹುಡುಕುತ್ತಾರೆ. ಹೊಸಹೊಸ ಮದ್ದುಗಳನ್ನು ಹುಡುಕಿ ತೆಗೆಯುತ್ತಾರೆ. ರೋಗಿಯ ಮೈಯನ್ನು ಕತ್ತರಿಸಿ, ಒಳಗೆ ಏನು ತೊಂದರೆಯಾಗಿದೆ ಎಂದು ಕಂಡು ಹಿಡಿಯುತ್ತಾರೆ. ಸಾಧ್ಯವಾದರೆ ಸರಿ ಮಾಡುತ್ತಾರೆ. ಮತ್ತೆ ದೇಹವನ್ನು ಹೊಲಿಯುತ್ತಾರೆ. ಇವರು ರೋಗದಿಂದ ಆಗುವ ನೋವನ್ನು ಕಡಿಮೆಮಾಡುತ್ತಾರೆ. ಸಾವಿನ ದಿನವನ್ನು ಆದಷ್ಟು ಮುಂದೆ ಹಾಕುತ್ತಾರೆ. ಇವರು ಇದನ್ನು ಕೇವಲ ದುಡ್ಡಿಗಾಗಿ ಮಾಡುವುದಿಲ್ಲ. ಕೀರ್ತಿಗಾಗಿ ಮಾಡುವುದಿಲ್ಲ. ಇವರ ಹುಡುಕಾಟದಿಂದ ಕೋಟಿ ಕೋಟಿ ಜನರಿಗೆ ಉಪಕಾರ ಆಗುತ್ತದೆ. ಪ್ಲೇಗು, ಸಿಡುಬು, ಕಾಲರಾ ಮುಂತಾದ ರೋಗಗಳಿಗೆ ಚುಚ್ಚುಮದ್ದು ಕಂಡುಹಿಡಿದವರು ಈ ರೀತಿಯ ಜನರೇ. ಇಂತಹವರ ಹುಡುಕಾಟದಿಂದ ಇಡೀ ಜಗತ್ತು ಸುಖಪಡುತ್ತದೆ.

ಬೇರೆ ಕೆಲವರು, ಕನಸು ಕಾಣುತ್ತಾರೆ. ಇವರಿಗೆ ಚಂದ್ರನ ಮೇಲೆ ನಡೆಯುವ ಕನಸು. ಆಕಾಶದಲ್ಲಿ ಹಾರುವ ಕನಸು. ಸಾವಿರಾರು ಮೈಲಿ ದೂರದಲ್ಲಿ ನಡೆಯುತ್ತಿರುವುದನ್ನು ಇಲ್ಲಿ, ಈಗ ಕಾಣುವ, ಕೇಳುವ ಕನಸು. ಆದರೆ ಇವರು ಈ ರೀತಿಯ ಕನಸು ಕಾಣುತ್ತಾ ಸುಮ್ಮನೆ ಕುಳಿತಿರುವುದಿಲ್ಲ. ಅದನ್ನು ನಿಜವಾಗಿ ಮಾಡಲು ದಾರಿ ಯಾವುದು ಎಂದು ಹುಡುಕುತ್ತಿರುತ್ತಾರೆ. ಇದು ಬಹಳ ಕಷ್ಟದ ದಾರಿ. ಈ ದಿನ ಕನಸು ಕಂಡವನಿಗೆ ನಾಳೆ ಉತ್ತರ ಸಿಕ್ಕಿಬಿಡುವುದಿಲ್ಲ. ಅವನು ಒಂದೋ ಎರಡೋ ಹೆಜ್ಜೆ ಮುಂದೆ ಇಡುತ್ತಾನೆ. ಅವನು ಸಾಯಬಹುದು. ನಂತರ ಬಂದವನು ಅದೇ ದಾರಿಯಲ್ಲಿ ಇನ್ನೂ ಎರಡು ಹೆಜ್ಜೆ ಮುಂದೆ ಹೋಗುತ್ತಾನೆ.

ನೂರಾರು ವರ್ಷಗಳು ಕಳೆದ ಮೇಲೆ ಲಕ್ಷಲಕ್ಷ ಜನರ ಒಟ್ಟು ಪ್ರಯತ್ನದಿಂದ ಒಬ್ಬ ಮನುಷ್ಯ ಚಂದ್ರನ ಮೇಲೆ ನಡೆಯುತ್ತಾನೆ ಅಥವಾ ಟೆಲಿಫೋನ್, ಟೆಲಿವಿಶನ್, ರೇಡಿಯೋಗಳು ಎಲ್ಲರ ಉಪಯೋಗಕ್ಕೂ ಸಿಗತೊಡಗುತ್ತವೆ. ಹತ್ತು ಜಾಣರು ನೂರು ವರ್ಷಗಳ ಕಾಲ ಕೆಲಸ ಮಾಡಿದರೆ ಬಿಡಿಸಬಹುದಾದ ಲೆಕ್ಕಕ್ಕೆ, ಒಂದೆರಡು ನಿಮಿಷಗಳಲ್ಲಿಯೇ

ಉತ್ತರ ಹೇಳಿ ಬಿಡುವ ಕಂಪ್ಯೂಟರ್ ಬರುತ್ತದೆ. ಇದು ವಿಜ್ಞಾನದ ದಾರಿ. ಇಲ್ಲಿನ ಹುಡುಕಾಟ ಸಾವಿರಾರು ಜನರದು. ನೂರಾರು ವರ್ಷಗಳದು. ಆದರೆ ಈ ರೀತಿಯ ಒಟ್ಟು ಹುಡುಕಾಟದಿಂದ ನಮಗೆಲ್ಲರಿಗೂ ಲಾಭ.

ಇನ್ನು ಕೆಲವರಿಗೆ ಉಪಯೋಗದ ಕಡೆಗೆ ಗಮನವಿಲ್ಲ. ಅವರು ಕುತೂಹಲ ತುಂಬಿದ ಕಣ್ಣು, ಮನಸ್ಸು ಇರುವವರು. ಒಂದು ಸೇಬಿನ ಮರದಿಂದ ಹಣ್ಣು ಕೆಳಗೆ



ವೈಜ್ಞಾನಿಕ ಸಂಶೋಧನೆಗಳು

ಬೀಳುವುದನ್ನು ನೋಡಿದ ನ್ಯೂಟನ್ ಎಂಬ ವಿಜ್ಞಾನಿ ಏಕೆ ಎಂದು ಕೇಳಿಕೊಂಡ. ಗೆಲಿಲಿಯೋ ಎಂಬ ಮತ್ತೊಬ್ಬ ವಿಜ್ಞಾನಿ, ಭೂಮಿಯು ಅಲ್ಲಾಡದೆ ನಿಂತಿಲ್ಲ, ಅದು ಸೂರ್ಯನ ಸುತ್ತ ತಿರುಗುತ್ತಿದೆ ಎಂದು ಕಂಡುಹಿಡಿದ. ನೂರಕ್ಕೆ ತೊಂಬತ್ತೊಂಬತ್ತು ಜನ 'ಮನುಷ್ಯನನ್ನು ದೇವರು ಹುಟ್ಟಿಸಿದ' ಎಂದು ಹೇಳುತ್ತಿರುವಾಗ, ಡಾರ್ವಿನ್ ಎಂಬುವನು, 'ಇಲ್ಲ, ಇಲ್ಲ ಮನುಷ್ಯನು ಅಮೀಬಾ ಎಂಬ ಅತಿ ಚಿಕ್ಕ ಜೀವಿಯಿಂದ ಮೊದಲಾದ

ಬೆಳವಣಿಗೆಯ ಕೊನೆಯ ಕೊಂಡಿ' ಎಂದು ಹೇಳಿದ. ಮನುಷ್ಯನ ಪೂರ್ವಜ ಮಂಗ ಆಗಿರಬಹುದು ಎಂದು ಹೇಳಿದ. ನಮ್ಮ ಸುತ್ತ ಬೇರೆ ಬೇರೆ ಬಣ್ಣ, ಆಕಾರ, ಗಾತ್ರಗಳನ್ನು ಹೊಂದಿರುವ ಲಕ್ಷ ಲಕ್ಷ ವಸ್ತುಗಳಿವೆಯಲ್ಲ, ಇವೆಲ್ಲವೂ ಬಹಳ ಬಹಳ ಚಿಕ್ಕ ಅಣುಗಳಿಂದ ಆಗಿವೆ ಎಂದು ಕಂಡುಹಿಡಿದವರೂ ಈ ರೀತಿಯ ಜನರೇ. ಈ ಅಣುಗಳನ್ನು, ಪರಮಾಣುಗಳನ್ನು ಯಾರೂ ಕಣ್ಣಿನಿಂದ ನೋಡಿಲ್ಲ. ಆದರೆ ಇವು ಇವೆ ಎಂದು ಎಲ್ಲರೂ ಒಪ್ಪಿಕೊಂಡಿದ್ದಾರೆ.

ಇಂತಹ ಹುಡುಕಾಟದಿಂದ ಏನೂ ಲಾಭವಿಲ್ಲ ಎಂದು ಅನ್ನಿಸಬಹುದು. ಆದರೆ ಅದು ನಿಜವಲ್ಲ. ಈ ವಿಜ್ಞಾನಿಗಳು ಮಾಡುವ ಕೆಲಸ ಅಡಿಪಾಯ ಇದ್ದ ಹಾಗೆ. ಹೂವು, ಹಣ್ಣು, ಕಾಯಿಗಳಿಗೆ ಕಾರಣವಾಗುವ ಬೀಜ ಇದ್ದ ಹಾಗೆ. ಇವರು ಕಂಡು ಹಿಡಿದ ವಿಷಯಗಳನ್ನು ಉಪಯೋಗಿಸಿಕೊಂಡು ಬೇರೆ ರೀತಿಯ ವಿಜ್ಞಾನಿಗಳು ನಾವು ಬದುಕುವ ರೀತಿಯನ್ನು ಬದಲಾಯಿಸುತ್ತಾರೆ. ಉದಾಹರಣೆಗೆ ಫ್ಯಾರಡೆ ಎನ್ನುವವನು ವಿದ್ಯುತ್ ಶಕ್ತಿಯನ್ನು ಕಂಡುಹಿಡಿಯದಿದ್ದರೆ, ಇಂದು ನಮ್ಮ ಮನೆಗಳಲ್ಲಿ ದೀಪ ಉರಿಯುತ್ತಿರಲಿಲ್ಲ. ನಮ್ಮ ಗಿರಣಿಗಳು ನಡೆಯುತ್ತಿರಲಿಲ್ಲ.

ಹಾಗೆಯೇ ಮೇರಿ ಕ್ಯೂರಿ ಎನ್ನುವವಳು ರೇಡಿಯಂ ಎಂಬ ವಸ್ತುವನ್ನು ಕಂಡುಹಿಡಿಯದಿದ್ದರೆ, ಇಂದಿನ ಆಸ್ಪತ್ರೆಗಳಲ್ಲಿ ಎಕ್ಸ್-ರೇ ತೆಗೆಯಲು ಆಗುತ್ತಿರಲಿಲ್ಲ. ಡಾರ್ವಿನ್ ಆಗ ಯೋಚನೆ ಮಾಡಿರದಿದ್ದರೆ ಇಂದು ನಮ್ಮ ಹೊಲಗದ್ದೆಗಳಲ್ಲಿ ಹೊಸ ಹೊಸ ತಳಿಗಳು ಇರುತ್ತಿರಲಿಲ್ಲ. ಗಣಿತ ಬಲ್ಲವರು ತಮ್ಮ ಕೋಣೆಗಳಲ್ಲಿ ಕುಳಿತು ಕಾಗದ ಲೇಖನಿ ತೆಗೆದುಕೊಂಡು ಮಾಡಿದ ಲೆಕ್ಕಾಚಾರದ ಫಲವಾಗಿಯೇ ಇಂದು ಮನುಷ್ಯ ಚಂದ್ರನ ತನಕ ಹೋಗಿದ್ದಾನೆ. ಆದ್ದರಿಂದಲೇ ವಿಜ್ಞಾನಿಗಳ ಹುಡುಕಾಟ ಮೂಲ ಕೆಲಸವಾದರೆ, ಇಂಜಿನಿಯರ್‌ಗಳು, ಡಾಕ್ಟರರು ಮಾಡುವುದು ಎರಡನೆಯ ಹಂತದ ಕೆಲಸ.

ಕೆಲವು ಸಲ ಈ ರೀತಿಯ ಹುಡುಕಾಟವೂ ದಾರಿ ತಪ್ಪುತ್ತದೆ. ಏಕೆಂದರೆ ಈ ಕೆಲಸ ಮಾಡುವವರಿಗೆ ಒಡೆಯರು ಇರುತ್ತಾರೆ. ಅವರು ರಾಜರು, ರಾಜಕಾರಣಿಗಳು.

ಇವರು ಯುದ್ಧದ ಹುಚ್ಚು ಹಿಡಿದ ಕೆಟ್ಟ ಜನ. ವಿಜ್ಞಾನಿಗಳು ತಮ್ಮ ಒಡೆಯರಿಗಾಗಿ ಹೊಸ ಹೊಸ ಆಯುಧಗಳನ್ನು ಹುಡುಕಿಕೊಡುತ್ತಾರೆ. ಹಿಂದೆ ಬಿಲ್ಲು-ಬಾಣ, ಗದೆ-ಕತ್ತಿ ಇದ್ದವು. ಆಮೇಲೆ ಬಂದೂಕು ಬಂತು, ಫಿರಂಗಿ ಬಂತು, ಬಾಂಬುಗಳು ಬಂದವು. ಈಗಲಂತೂ ಕೇಳಬೇಕಾಗಿಯೇ ಇಲ್ಲ. ಸಾವಿರಾರು ಮೈಲಿಗಳ ದೂರದಲ್ಲಿ ಇರುವ ಯಾರೋ ಒಬ್ಬ ಒಂದು ಗುಂಡಿ ಒತ್ತಿದರೆ ಸಾಕು. ಇಲ್ಲಿರುವ ನಾವೆಲ್ಲರೂ ಸುಟ್ಟು ಬೂದಿಯಾಗುತ್ತೇವೆ. ಆಗ ಸೈನಿಕರು ಮಾತ್ರ ಸಾಯುವುದಿಲ್ಲ. ಏನೂ ಅರಿಯದ ಪುಟ್ಟ ಕಂದಮ್ಮಗಳು ಸಾಯುತ್ತಾರೆ. ನನ್ನ, ನಿಮ್ಮ ಹೆಂಡತಿ, ಮಕ್ಕಳು, ಅಣ್ಣ-ತಂಗಿ, ಗೆಳೆಯರು ಕೊನೆಗೆ ನಾವು, ನೀವು ಎಲ್ಲರೂ ಪುಡಿ, ಪುಡಿ, ಪುಡಿ ಆಗುತ್ತೇವೆ. ಈಗ ರೋಗಗಳನ್ನು ಹರಡುವ ಬಾಂಬುಗಳು ಬಂದಿವೆ. ಊರು ಕೇರಿಗಳನ್ನು ಹಾಳು ಮಾಡದೆ ಮನುಷ್ಯರನ್ನು ಮಾತ್ರ ಕೊಲ್ಲುವ ಬಾಂಬುಗಳೂ ಬಂದಿವೆ. ಇಂತಹ ಬಾಂಬುಗಳ ಹುಡುಕಾಟ ಯಾರಿಗೆ ಬೇಕು???

ಯಾರಿಗೂ ಹೆದರದ ವೀರರ ದಾರಿ

ಇನ್ನು ಮೇಲೆ, ಧೈರ್ಯ, ಸಾಹಸ ಮತ್ತು ಕುತೂಹಲ ಇರುವವರ, ಹುಡುಕಾಟದ ಬಗ್ಗೆ ಯೋಚನೆ ಮಾಡೋಣ. ಇವರು ನಮ್ಮ ನಿಮ್ಮ ಹಾಗೆ, ಮನೆಯಲ್ಲಿ ಕುಳಿತು ಕೆಲಸಕ್ಕೆ ಹೋಗಿ ಉಂಡು ತಿಂದು, ಮಕ್ಕಳು ಮರಿ ಮಾಡಿ ಕಂತೆ ಒಗೆಯಲು ಇಷ್ಟಪಡುವುದಿಲ್ಲ. ಬೇರೆ ಯಾರೂ ಮಾಡದ ಕೆಲಸ ಮಾಡಲು ಇವರಿಗೆ ಇಷ್ಟ. ಇವರು ಹಿಮಾಲಯದಂತಹ ಎತ್ತರದ ಬೆಟ್ಟವನ್ನು ಹತ್ತಲು ಹೊರಡುತ್ತಾರೆ. ಚಳಿಗೆ ಹೆದರುವುದಿಲ್ಲ. ಜಾರಿ ಬೀಳಬಹುದು ಎಂದು ಹೆದರುವುದಿಲ್ಲ. ಸಮುದ್ರದ ಒಳಗೆ ಮುಳುಗಿ ಏನಿದೆ ಎಂದು ಹುಡುಕಬಯಸುತ್ತಾರೆ. ದೂರದಿಂದ ನೋಡಿದರೆ ಹೆದರಿಕೆ ಹುಟ್ಟಿಸುವ, ಕಾಡುಗಳ ಒಳಗೆ ನುಗ್ಗುತ್ತಾರೆ. ಅಲ್ಲಿರುವ ಕಾಡುಜನರನ್ನು ನೋಡುತ್ತಾರೆ. ಅವರಿಗೆ ಓದು ಕಲಿಸುತ್ತಾರೆ. ಔಷಧ ಕೊಡುತ್ತಾರೆ ಅಥವಾ ಎಲ್ಲಿಗೂ ಹೋಗುವುದಿಲ್ಲ. ತಾವು ಇರುವ ಊರಿನಲ್ಲಿಯೇ, ಬೆಂಕಿ ಹತ್ತಿದ ಮನೆಯೊಳಗೆ ನುಗ್ಗಿ ಯಾರದೋ ಜೀವ ಉಳಿಸುತ್ತಾರೆ. ಹೆಚ್ಚು ಕಡಿಮೆ ಆದರೆ ತಮ್ಮ

ಜೀವವನ್ನೇ ಕೊಡುತ್ತಾರೆ. ಎಷ್ಟೋ ಸಲ, ತಮಗೆ ಭಯಂಕರವಾದ ಅಪಾಯ ಖಂಡಿತವೆಂದು ತಿಳಿದಾಗಲೂ ಹಿಂಜರಿಯುವುದಿಲ್ಲ.



ಸಾಗರಗರ್ಭದಲ್ಲಿ ಹುಡುಕಾಟ

ನಮ್ಮಲ್ಲಿ ಕೆಲವರಿಗೆ ಈ ರೀತಿ ಅಪಾಯಗಳನ್ನು ಎದುರಿಸುವ ಕೆಲಸ ಹುಂಬತನ ಎಂದು ತೋರಬಹುದು. ಆದರೆ ಈ ರೀತಿಯ 'ಹುಂಬರು' ಇಲ್ಲದಿದ್ದರೆ ನಾವು ಇದುವರೆಗೂ ಕಾಡುಗಳಲ್ಲಿಯೇ ಇರುತ್ತಿದ್ದೆವು. ಮೊದಲ ಬಾರಿ ವಿಮಾನದಲ್ಲಿ ಕುಳಿತು ಹಾರಿದವನನ್ನು ನೆನಪು ಮಾಡಿಕೊಳ್ಳಿ. ಹಿಮಾಲಯ ಪರ್ವತದ ಅತ್ಯಂತ ಎತ್ತರದ ಶಿಖರವಾದ ಗೌರೀಶಂಕರದ ಮೇಲೆ ನಿಂತ ತೇನ್‌ಸಿಂಗ್, ಹಿಲರಿ ಆಗಲೀ, ಉಪಗ್ರಹದಲ್ಲಿ ಕುಳಿತು ಆಕಾಶದ ಆಚೆಗೆ ಹಾರಿದ ಯೂರಿಗಗಾರಿನ್ ಆಗಲೀ, ನಮ್ಮ ನಿಮ್ಮ ರೀತಿಯ ಮನುಷ್ಯರಲ್ಲ. ಅವರು ಧೀರರು. ಅವರ ರೀತಿಯ ಹುಡುಕಾಟದಿಂದ ಯಾರಿಗೂ ಅಪಾಯವಿಲ್ಲ. ಅವರಿಗೆ ನಮ್ಮ ನಮಸ್ಕಾರ. ನಮ್ಮ ನಿಮ್ಮ ಮಕ್ಕಳು ಅವರ ಹಾಗೆ ಧೀರರಾಗಲಿ ಎಂದು ನಾವು ಆಸೆ ಪಡಬೇಕು. ಹೆದರುವಂತೆ, ಬೆಳೆದ ಮಕ್ಕಳು ಸರಿಯಾಗಿ ಜೀವನವನ್ನು ಎದುರಿಸಲಾರರು. ನಮ್ಮ ಮಕ್ಕಳಿಗೆ ಅರ್ಧರಾತ್ರಿಯಲ್ಲಿ ಸಿನಿಮಾ ನೋಡುವುದು, ಒಂಟಿಯಾಗಿ ಸಿಕ್ಕ ಹುಡುಗಿಯನ್ನು ಚುಡಾಯಿಸುವುದು ಇವಷ್ಟೇ ಸಾಹಸ ಎಂಬ ನಂಬಿಕೆ ಬರಬಾರದು. ಬದಲಾಗಿ ಗಂಡು ಮಕ್ಕಳಿರಲಿ, ಹೆಣ್ಣು ಮಕ್ಕಳಿರಲಿ, ಕಲ್ಲು ಗುದ್ದಿ ನೀರು ತೆಗೆಯುವ ಛಾತಿಯನ್ನು ಬೆಳೆಸಿಕೊಳ್ಳಬೇಕು.

ಚೆಲುವನ್ನು ಕಂಡವರು, ಚೆಲುವನ್ನು ಕಟ್ಟಿದವರು

ಸದಾ ಹುಡುಕಾಟ ಮಾಡುತ್ತಿರುವ ಮತ್ತೊಂದು ಗುಂಪು ಕಲಾವಿದರದು. ಸಂಗೀತಗಾರರು, ಚಿತ್ರಗಾರರು, ಶಿಲ್ಪಿಗಳು, ನಟರು, ಕವಿಗಳು, ನರ್ತಕಿಯರು ಇವರೆಲ್ಲರದೂ ಕಲಾವಿದರ ಗುಂಪು. ಇವರದು ಸೌಂದರ್ಯದ ಹುಡುಕಾಟ. ಇದುವರೆಗೆ ಜಗತ್ತಿನಲ್ಲಿ ಇಲ್ಲದಿರುವ ಆದರೆ, ಸಂತೋಷಕೊಡುವ ವಸ್ತುಗಳನ್ನು ಇವರು ಹುಟ್ಟಿಸುತ್ತಾರೆ. ಬೇಲೂರಿನ ಗುಡಿಯಲ್ಲಿ ಇರುವ ಶಿಲಾಬಾಲಕಿಯೊಬ್ಬಳ ಬಗ್ಗೆ ಯೋಚನೆ ಮಾಡೋಣ. ಮೊದಲು ಕಲ್ಲು ಇತ್ತು. ಆ ಕಾಲದಲ್ಲೂ ಸುಂದರವಾದ ಹುಡುಗಿಯರು ಇದ್ದರು. ನನಗೆ ನಿಮಗೆ, ಕಲ್ಲು ಗೊತ್ತು, ಸುಂದರಿಯರೂ ಗೊತ್ತಿರಬಹುದು. ಆದರೆ ಕಲ್ಲಿನ ನಡುವೆ ಅಡಗಿರುವ



ಶ್ರೀ ಕುವೆಂಪು

ಹುಡುಗಿಯನ್ನು, ಚಾಣವನ್ನು ಬಳಸಿ ಹುಡುಕಿ ತೆಗೆಯುವುದು ಶಿಲ್ಪಿಗೆ ಮಾತ್ರ ಸಾಧ್ಯವಾಗುವ ಕೆಲಸ.. ಹಾಗೆಯೇ ನೋಡಿ.

ಕನ್ನಡ ಭಾಷೆಯಲ್ಲಿ ಇರುವ ಎಲ್ಲ ಅಕ್ಷರಗಳು ನನಗೆ ನಿಮಗೆ ಗೊತ್ತು. ಕವಿಗಳಾದ ಕೆ.ವಿ. ಪುಟ್ಟಪ್ಪನವರಿಗೂ ಗೊತ್ತು. ಆದರೆ ಅವರು ಆ ಅಕ್ಷರಗಳನ್ನೇ,



ಡಾ|| ರಾಜ್‌ಕುಮಾರ್

ಪದಗಳನ್ನೇ ಉಪಯೋಗಿಸಿಕೊಂಡು ನೂರಾರು ಸುಂದರವಾದ ಪದ್ಯಗಳನ್ನು ಬರೆದಿದ್ದಾರೆ. ಅವರು ಬರೆಯುವ ಮೊದಲು ಆ ಪದ್ಯಗಳು ಇರಲಿಲ್ಲ, ಈಗ ಇವೆ. ಅವರು ಇಲ್ಲದೆ ಹೋದಾಗಲೂ ಅವು ಉಳಿದೇ ಇರುತ್ತವೆ. ಜಗತ್ತಿನಲ್ಲಿ ಇರುವ ಅನೇಕ ಸುಂದರವಾದ ಸಂಗತಿಗಳನ್ನು ಮನುಷ್ಯ ಮಾಡಿಲ್ಲ. ಸೂರ್ಯ, ಚಂದ್ರ, ನದಿ, ಬೆಟ್ಟ, ಹೂವು, ಹಸುಳೆ ಎಲ್ಲದರಲ್ಲಿಯೂ ಚೆಲುವು ತಾನಾಗಿಯೇ ಇರುತ್ತದೆ. ಅವುಗಳನ್ನು ಹುಡುಕಿ ನೋಡುವ

ಕಣ್ಣುಗಳನ್ನು ನಾವು ಬೆಳಸಿಕೊಳ್ಳಬೇಕು. ಹೀಗೆ ಆಗಲು ದೊಡ್ಡ ಕವಿಯೇ ಬೇಕಾಗಿಲ್ಲ. ತನ್ನ ಮಗುವಿನ ಹುಬ್ಬನ್ನು ಬೇವಿನ ಎಸಳಿಗೆ ಹೋಲಿಸಿದ, ಅದರ ಕಣ್ಣಿನ ನೋಟವು ಶಿವನು ಕೈಯಲ್ಲಿ ಹಿಡಿದ ಕತ್ತಿಯ ಹಾಗೆ ಹೊಳೆಯುತ್ತಿದೆ ಎಂದ, ಹಳ್ಳಿಯ ಹೆಣ್ಣು ಮಗಳಿಗೆ ಈ ರೀತಿಯ ಕಣ್ಣುಗಳು ಇದ್ದವು. ಆಕಾಶದ ತುಂಬ ಇರುವ ಮೋಡಗಳು, ಬೆಟ್ಟ ಎಂಬ ಶಿವಲಿಂಗಕ್ಕೆ ಮಳೆನೀರಿನ ಅಭಿಷೇಕ, ಜಳಕ ಮಾಡಿಸುತ್ತಿವೆ ಎಂದ ಕವಿಯದು ಎಂಥ ಶಕ್ತಿ?

ಸಂಗೀತದ ಮಾತೂ ಹಾಗೆಯೇ. ನಮ್ಮ ನಿಮ್ಮ ಪ್ರೀತಿಯ ನಟ, ಹಾಡುಗಾರ ಡಾ|| ರಾಜಕುಮಾರ್ ಒಂದು ಹಾಡನ್ನು ಹಾಡುವುದೇ ತಡ, ಅದು ಕನ್ನಡನಾಡಿನ ಎಲ್ಲರ ಆಸ್ತಿಯಾಗಿಬಿಡುತ್ತದೆ. ಅವರ ತುಟಿಗಳ ಮೇಲೆ ಕುಣಿಯುತ್ತದೆ. ಆ ಹಾಡಿನ ಹಿಂದೆ ಎಷ್ಟು ಜನರ ಹುಡುಕಾಟ ಇದೆ, ಯೋಚಿಸಿ. ಹಾಡನ್ನು ಬರೆದವನು ಒಬ್ಬ ಕವಿ. ಅದಕ್ಕೆ ಸಂಗೀತವನ್ನು ಅಳವಡಿಸಿದವನು ಬೇರೊಬ್ಬ. ಇನ್ನು ಕೆಲವರು ಸಂಗೀತ ವಾದ್ಯಗಳನ್ನು ನುಡಿಸುತ್ತಾರೆ. ಇವರೆಲ್ಲರ ಕೆಲಸಕ್ಕೆ ಕಳಶ ಇಟ್ಟ ಹಾಗೆ ರಾಜ್‌ಕುಮಾರ್ ಅವರ ಮಧುರವಾದ ಕಂಠ. ಇವರೆಲ್ಲರ ಒಟ್ಟು ಹುಡುಕಾಟವು ಅದುವರೆಗೂ ಯಾರೂ ಕೇಳಿರದ ಹಾಡು ಒಂದಕ್ಕೆ ಹುಟ್ಟು ನೀಡಿದೆ.

ನಮ್ಮೆಲ್ಲರಿಗೆ ಆ ರೀತಿ ಹಾಡುವ ಶಕ್ತಿ ಇಲ್ಲದೆ ಇರಬಹುದು. ಆದರೆ ಕೇಳುವ, ಸಂತೋಷಪಡುವ, ಮೆಚ್ಚುವ ಕಿವಿಗಳನ್ನಾದರೂ ಬೆಳೆಸಿಕೊಳ್ಳಬಹುದಲ್ಲವೇ? ಆಗ ನಾವೆಲ್ಲರೂ ಒಳ್ಳೆಯ ಸಂಗೀತವನ್ನು ಹುಡುಕಿಕೊಂಡು ಹೋಗುತ್ತೇವೆ. ಸುಂದರವಾದ ಕವಿತೆಗಳಿಗಾಗಿ, ಕಥೆ-ಕಾದಂಬರಿಗಳಿಗಾಗಿ, ಚಿತ್ರಗಳಿಗಾಗಿ ಆತುರಪಡುತ್ತೇವೆ. ಕರ್ನಾಟಕದಲ್ಲಿ ಇರುವ ಸುಂದರ ಸ್ಥಳಗಳಿಗೆ ಪ್ರವಾಸ ಹೋಗೋಣ ಎಂದುಕೊಳ್ಳುತ್ತೇವೆ. ಒಂದು ನಾಟಕ, ಯಕ್ಷಗಾನ ನೋಡಲೆಂದು ಮೈಲಿಗಟ್ಟಲೆ ನಡೆಯಲು ತಯಾರಾಗುತ್ತೇವೆ. ಈ ರೀತಿಯ ಕೆಲಸಗಳಿಗಾಗಿ ಖರ್ಚು ಮಾಡಿದ ಹಣ ದಂಡ ಅಲ್ಲ. ಅದರ ಬದಲು ಮೂಟೆಕಟ್ಟಿ ಮೊಮ್ಮಕ್ಕಳಿಗೆ, ಮರಿ ಮಕ್ಕಳಿಗೆ ಎಂದು ಇಟ್ಟಿರುವ ಹಣ ಇದೆಯಲ್ಲ. ಅದು ದಂಡ. ತಲೆಯ ಮೇಲೆ ತುಪ್ಪದ ಗಡಿಗೆ ಇಟ್ಟುಕೊಂಡು, ರೊಟ್ಟಿಯನ್ನು ನೀರಿನಲ್ಲಿ ಅದ್ದಿಕೊಂಡು ತಿನ್ನುವವನು ಜಾಣ ಅಲ್ಲ, ದಡ್ಡ.

ಕಲೆಗಾರರ ಈ ರೀತಿಯ ಹುಡುಕಾಟವಂತೂ ಯಾರಿಗೂ ತೊಂದರೆ ಕೊಡುವುದಿಲ್ಲ. ಆದರ ಬಳಿಗೆ ಹೋಗಲು ತಯಾರಾಗಿರುವ ಎಲ್ಲರಿಗೂ ಹಿಗ್ಗು ಕೊಡುತ್ತದೆ, ತಿಳುವಳಿಕೆ ಕೊಡುತ್ತದೆ. ಚೀನಾದೇಶದ ಒಂದು ಗಾದೆ ಇದನ್ನೇ ಹೇಳುತ್ತದೆ. 'ನಿನ್ನ ಹತ್ತಿರ ಒಂದು ನಾಣ್ಯ ಇದ್ದರೆ, ಒಂದು ರೊಟ್ಟಿ ಕೊಂಡುಕೋ. ಎರಡು ನಾಣ್ಯ ಇದ್ದರೆ, ಎರಡು ರೊಟ್ಟಿ ಕೊಂಡುಕೊಳ್ಳಬೇಡ. ಬದಲಾಗಿ ಒಂದು ರೊಟ್ಟಿ ಮತ್ತು ಒಂದು ಹೂವು ಕೊಂಡುಕೋ. ಇದು ಸರಿಯಾದ ಪಾಠ. ನಾವು ಹೀಗೆ ನಡೆದುಕೊಂಡರೆ ನಮ್ಮ ಮನೆ, ನಮ್ಮ ಮನಸ್ಸು, ಊರು-ಕೇರಿ ಸುಂದರ ಆಗುತ್ತವೆ. ನಿರ್ಮಲ ಆಗುತ್ತವೆ. ನಮ್ಮ ಮನಸ್ಸು ಪಾತ್ರೆಯ ಹಾಗೆ. ಅದರೊಳಗೆ ಒಳ್ಳೆಯತನ, ಸುಂದರವಾದುದರ ಬಗೆಗಿನ ಪ್ರೀತಿ ತುಂಬಿದಾಗ ಕೆಟ್ಟ ಕೆಲಸಕ್ಕೆ, ಕೆಟ್ಟ ಆಲೋಚನೆಗೆ ಜಾಗವೇ ಇರುವುದಿಲ್ಲ.

ಮನುಷ್ಯ ಸಾವಿರಾರು ವರ್ಷಗಳಿಂದ, ನೂರಾರು ದೇಶಗಳಲ್ಲಿ ಈ ರೀತಿ ಚೆಲುವಿಗಾಗಿ ಹುಡುಕಾಡಿದ್ದಾನೆ. ಸುಂದರವಾದ ಚಿತ್ರಗಳಿರುವ ಅಜಂತಾದ ಗುಹೆಗಳು, ಬಸವಣ್ಣನವರ ವಚನಗಳು, ತಾಜ್‌ಮಹಲ್ ಇವೆಲ್ಲವನ್ನು ಹುಡುಕಿ, ಹುಟ್ಟಿಸಿ ನಮಗೆ ಕೊಟ್ಟವರಿಗೆ ನಮ್ಮ ನಮಸ್ಕಾರ.

ನನಗೂ ನಿನಗೂ ಅಂಟಿದ ನಂಟು!

ಮನುಷ್ಯರು ಒಂಟಿಯಾಗಿ ಬದುಕಲು ಇಷ್ಟಪಡುವುದಿಲ್ಲ. ಹಾಗೆ ಇಷ್ಟಪಟ್ಟು, ಊರುಬಿಟ್ಟು ಕಾಡಿಗೆ ಹೋಗುವವರು ಬಹಳ ಕಡಿಮೆ. ಅವರೂ ಎಷ್ಟೋ ಸಲ ಕಾಡುಬಿಟ್ಟು ಮತ್ತೆ ಊರಿಗೆ ಬರುತ್ತಾರೆ. ಆಶ್ರಮ-ಮಠ-ಮನೆ ಕಟ್ಟಿಕೊಳ್ಳುತ್ತಾರೆ. ಉಳಿದವರು ನಮ್ಮ ಹಾಗೆ ಲಕ್ಷ ಲಕ್ಷ ಜನ. ನಾವು ತಂದೆ, ತಾಯಿ, ಅಣ್ಣ, ತಮ್ಮ, ಅಕ್ಕ, ತಂಗಿ, ಹೆಂಡತಿ, ಮಕ್ಕಳು ಎಂದು ಬೇರೆ ಬೇರೆಯವರನ್ನು ಕರೆಯುತ್ತೇವೆ. ರಕ್ತ ಸಂಬಂಧ ಇರುವ ಇವರಲ್ಲದೆ ಗೆಳೆಯ, ಗೆಳತಿ ಎಂದು ಅನೇಕ ಜನ. ಹೀಗೆ ನಮ್ಮ ನೆಂಟರು, ಗೆಳೆಯರು ನಮ್ಮವರಾಗುತ್ತಾರೆ. ಉಳಿದವರು ಪರರಾಗುತ್ತಾರೆ.

ಪ್ರಾಣಿಗಳು ಈ ರೀತಿಯ ಸಂಬಂಧಗಳನ್ನು ಕಟ್ಟಿಕೊಳ್ಳುವುದಿಲ್ಲ. ಅವುಗಳು ಹುಟ್ಟಿದ ನಂತರ, ಹುಟ್ಟಿಸಿದ ತಂದೆ-ತಾಯಿಯರಿಂದ ದೂರವಾಗಿಬಿಡುತ್ತವೆ. ಅವು ಒಟ್ಟಾಗಿ ಇರುತ್ತವೆ. ಆದರೆ ಒಟ್ಟಾಗಿ ಬದುಕುವುದಿಲ್ಲ.

ಆದರೆ ನಾವು, ಮನುಷ್ಯರು ನಮ್ಮದೇ ಕುಟುಂಬಗಳನ್ನು ಕಟ್ಟಿಕೊಳ್ಳುತ್ತೇವೆ. ಹೆಂಡತಿ ಮಕ್ಕಳನ್ನು ನಾವು ಪ್ರೀತಿಸುತ್ತೇವೆ. ಅವರು ನಮ್ಮನ್ನು ಪ್ರೀತಿಸಬೇಕು ಎಂದು ನಮ್ಮ ಆಸೆ. ಈ ಪ್ರೀತಿ ಎಂದರೆ ಏನು? ಇದನ್ನು ಕೊಡುವುದು ಹೇಗೆ? ಪಡೆಯುವುದು ಹೇಗೆ? ಅದನ್ನು ಪಡೆಯುವುದರಿಂದ, ಕೊಡುವುದರಿಂದ ಸಂತೋಷ ಸಿಗುತ್ತದಲ್ಲಾ ಏಕೆ? ತಾಯಿ ತನ್ನ ಬಾಯಿಗೆ ತೆಗೆದುಕೊಂಡು ಹೋಗುತ್ತಿರುವ ರೊಟ್ಟಿಯ ಚೂರನ್ನು ಬೇಕಾದರೂ ತನ್ನ ಮಗುವಿಗೆ ಕೊಟ್ಟು ಬಿಡುವಳಲ್ಲ. ಪ್ರೀತಿಸುವ ಹೆಣ್ಣಿಗಾಗಿ, ಗಂಡಿಗಾಗಿ ಪ್ರಾಣ ಕೊಡುವ ಜನ, ಏಕೆ ಹಾಗೆ ಮಾಡುತ್ತಾರೆ? ಪ್ರೀತಿಗೂ ತ್ಯಾಗಕ್ಕೂ ಇರುವ ನಂಟು ಯಾವ ಬಗೆಯದು? ಹಾಗೆಯೇ ಪ್ರೀತಿಗೂ, ದ್ವೇಷ, ಹೊಟ್ಟೆಕಿಚ್ಚು ಮುಂತಾದ ಭಾವನೆಗಳಿಗೂ ಸಂಬಂಧ ಇದೆಯೇ?

ಈ ರೀತಿಯ ಪ್ರಶ್ನೆಗಳಿಗೆ ಉತ್ತರ ಸುಲಭವಲ್ಲ. ಆದರೆ ಅವುಗಳಿಗಾಗಿ ಹುಡುಕದೆ ಹೋದರೆ, ಬೇರೆ ದಾರಿಯಿಲ್ಲ. ಏಕೆಂದರೆ ನಾವು ಜೀವನ ನಡೆಸುವ ರೀತಿಯೇ ಇವುಗಳಿಗೆ ನಾವು ಕೊಡುವ ಉತ್ತರಗಳ ಮೇಲೆ ನಿಂತಿದೆ.

ಈಗ ಒಂದೋ ಎರಡೋ ಸಂಬಂಧಗಳನ್ನು ಕುರಿತು ಯೋಚನೆ ಮಾಡಲು ಪ್ರಯತ್ನಪಡೋಣ.

ಇಬ್ಬರು ಗಂಡು ಹೆಣ್ಣು ಇರುತ್ತಾರೆ. ಅವರು ಒಬ್ಬರನ್ನು ಇನ್ನೊಬ್ಬರು ಪ್ರೀತಿಸಿದರು ಎನ್ನುತ್ತೇವೆ. ಹಾಗೆಂದರೆ ಏನು? ಇವಳು ಅಥವಾ ಇವನು ನನಗೆ ಬೇಕು ಎನ್ನುವುದು ಪ್ರೀತಿಯೇ? ಆಗ ಪ್ರೀತಿ ಎನ್ನುವುದು ನನ್ನ ಸಂತೋಷವನ್ನು ಕುರಿತ ಮಾತು. ಅಲ್ಲದೆ ಹೋದರೆ, ಇವಳ ಸಂತೋಷಕ್ಕಾಗಿ ನಾನು ಏನು ಬೇಕಾದರೂ ಕೊಡಲು, ಮಾಡಲು ತಯಾರಾಗಿದ್ದೇನೆ ಎನ್ನುವುದು, ಹಾಗೆ ಮಾಡುವುದು ಪ್ರೀತಿಯೇ?

ಆಗ ಪ್ರೀತಿ ಎನ್ನುವುದು ನನ್ನ ಸಂತೋಷ ಅಲ್ಲ, ನಾನು ಯಾರನ್ನು ಪ್ರೀತಿಸುತ್ತಿರುವೆನೋ ಅವರ ಸಂತೋಷ ಅಥವಾ ಪ್ರೀತಿ ಇದ್ದ ಕಡೆ, ನನ್ನ ಸಂತೋಷ ಬೇರೆಯಲ್ಲ, ಅವಳ ಸಂತೋಷ ಬೇರೆಯಲ್ಲ ಎಂದು ಆಗುತ್ತದೆಯೇ? ಇಬ್ಬರ ಸಂತೋಷವೂ ಒಂದೇ ಆಗುತ್ತದೆಯೇ? ಹಾಗಾದರೆ ನಾನು ಪ್ರೀತಿಸುವ ಹುಡುಗಿ ನನ್ನವಳಾಗಬೇಕು. ನನ್ನವಳು ಮಾತ್ರ ಆಗಬೇಕು ಎನ್ನುತ್ತೇವಲ್ಲ. ಅವಳನ್ನು ಬೇರೆ ಯಾರಾದರೂ ಇಷ್ಟಪಟ್ಟರೆ, ಅವಳು ಬೇರೆ ಯಾರನ್ನಾದರೂ ಬಯಸಿದರೆ ಅವಳು, ಅವನು ಇಬ್ಬರನ್ನೂ ಕೊಲ್ಲುತ್ತೇವೆ ಎನ್ನುತ್ತಾರಲ್ಲ, ಕೊಲ್ಲುತ್ತಾರಲ್ಲ ಅದು ಯಾಕೆ? ಉತ್ತರ ಹೇಳುವುದು ಕಷ್ಟ. ಹೆಣ್ಣಿನ, ಗಂಡಿನ ಪ್ರೀತಿಯು ಮನುಷ್ಯನ ಮೂಲಗುಣಗಳಲ್ಲಿಯೇ ಬದಲಾವಣೆ ತರುತ್ತದೆಯೇ ಎಂಬ ಪ್ರಶ್ನೆಗೆ ಉತ್ತರ 'ಇಲ್ಲ' ಎನ್ನುವುದೇ ಆಗಿದೆ.

ಮದುವೆ ಆದ ಮೇಲೆ ಪ್ರೀತಿಗೆ ಏನು ಆಗುತ್ತದೆ? ಆಗ, ಯಾರ ಮಾತನ್ನು ಯಾರು ಕೇಳಬೇಕು, ಯಾರು ಯಾವ ಕೆಲಸ ಮಾಡಬೇಕು ಮುಂತಾದ ಪ್ರಶ್ನೆಗಳು ಹುಟ್ಟುತ್ತವೆ. ನನಗೆ ಹೇಗೆ ಬೇಕೋ ಹಾಗೆ, ಇನ್ನೊಬ್ಬರು ಇರಬೇಕು ಎಂದುಕೊಳ್ಳುತ್ತೇವೆ. ಹೊಂದಾಣಿಕೆಯ ಬದಲು ಹಟ ಹಿಡಿಯುತ್ತೇವೆ. ಜಗಳ ಹುಟ್ಟುವುದೇ ಹೀಗೆ. ಜಗಳವಿಲ್ಲದೆ ಸಂಸಾರವಿಲ್ಲ. ಆದರೆ ಬರೀ ಜಗಳವೇ ಸಂಸಾರವಲ್ಲ. ಕಾಲಕಳೆದ ಮೇಲೆ ಆ ಗಂಡು ಆ ಹೆಣ್ಣಿನ ನಡುವಿನ ಸೆಳೆತ ಕಡಿಮೆ ಆಗುತ್ತದೆ. ಎಂತಹ ಸುಂದರ ಹೆಣ್ಣಿನ ಮುಖದಲ್ಲೂ ನೆರೆ-ತೆರೆ, ಸುಕ್ಕು-ಕಲೆ ಕಾಣಿಸಿಕೊಳ್ಳುತ್ತವೆ. ಗಂಡಿನ ಕೂದಲು ಉದುರುತ್ತದೆ, ಹೊಟ್ಟೆ ಬೆಳೆಯುತ್ತದೆ. ಆಗಲೂ ಅವರನ್ನು ಹಿಡಿದು ಇಡುವ ಶಕ್ತಿ ಯಾವುದು? ಅದು ಪ್ರೀತಿಯೇ? ಏಕೆಂದರೆ ಯಾವಾಗಲೂ ಹೀಗೆಯೇ ಇರುವುದಿಲ್ಲ. ತಾನು ಕೈಹಿಡಿದ, ತನ್ನ ಮಕ್ಕಳ ತಾಯಿಯನ್ನು ಗಂಡ ಬೆಂಕಿ ಇಟ್ಟು ಕೊಲ್ಲುತ್ತಾನೆ, ಅಥವಾ ಒಬ್ಬರನ್ನು ಒಬ್ಬರು ದಿನದಿನವೂ ಕಟುವಾದ ಮಾತುಗಳ ಬೆಂಕಿಯಲ್ಲಿ ಬೇಯಿಸುತ್ತಾರೆ, ಅಥವಾ ಅವರಿಬ್ಬರೂ ಒಂದಾಗಿ, ಇಡೀ ಪ್ರಪಂಚವನ್ನು ಶತ್ರು ಎಂದು ತಿಳಿದುಕೊಳ್ಳುತ್ತಾರೆ. ಹಣ ಸಂಪಾದನೆಯಲ್ಲಿ, ಆಸ್ತಿ-ಪಾಸ್ತಿ ಮಾಡಿಕೊಳ್ಳುವುದರಲ್ಲಿ, ಉಳಿದವರನ್ನು ಹಂಗಿಸುವುದರಲ್ಲಿ ಕಾಲ ಕಳೆಯುತ್ತಾರೆ. ಅಂಥ ಗಂಡ ಹೆಂಡಿರ ಕಣ್ಣುಗಳಲ್ಲಿ ಪ್ರೀತಿ ಇರುವುದಿಲ್ಲ. ದುಃಖ, ಆಸೆ, ಕೋಪ ಇರುತ್ತದೆ. ಕನ್ನಡದ ದೊಡ್ಡ ಕವಿ ಬೇಂದ್ರೆ ಹೀಗೆ ಹೇಳಿದ್ದಾರೆ. ಹಳ್ಳದ ದಂಡೆಯಲ್ಲಿ

ಹೆಂಡತಿಯನ್ನು ಮೊದಲು ಕಂಡಾಗ ಇದ್ದ ನಗು ಎಲ್ಲೋ ಹಾರಿ ಹೋಗುತ್ತದೆ. ಅವಳು ಸೊಪ್ಪಿನ ಹಾಗೆ ಸೊರಗುತ್ತಾಳೆ. ಹಪ್ಪಳದ ಹಾಗೆ ಸುಡುತ್ತಾಳೆ. ಬಾಳುವೆ ಎನ್ನುವುದು ಅವಳಿಗೆ ಒಲೆ ಆಗುತ್ತದೆ. ಅದೇ ಕವಿ ಬೇರೊಂದು ಕಡೆ ಹೇಳಿದಂತೆ ಅವಳ ಮುಖ 'ಹುಣ್ಣಿಮೆ ಚಂದಿರನ ಹೆಣ' ಆಗುತ್ತದೆ.

ಹೀಗೆ ಆಗುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವೇ? ಗಂಡ ಹೆಂಡತಿ ಹಣ್ಣು ಹಣ್ಣು ಮುದುಕ-ಮುದುಕಿ ಆದಾಗಲೂ, 'ಆತ ಬಡವ ನಾನು ಬಡವಿ, ಒಲವೆ ನಮ್ಮ ಬದುಕು' ಎಂದುಕೊಂಡು, ಬದುಕಬಹುದೇ? ಒಬ್ಬರಿಗೊಬ್ಬರು ಊರುಗೋಲು ಆಗಬಹುದೇ? ಉತ್ತರ ಕಷ್ಟ. ದಾರಿ ಗೊತ್ತಿಲ್ಲ. ಆದರೆ ನಾನು, ನನ್ನ ಹೆಂಡತಿ ಹಾಗೆ ಇರಬೇಕು ಎಂದು ಆಸೆಪಡುವುದು ಎಷ್ಟು ಚೆಂದ! ಅಲ್ಲವೆ?

ಗಂಡ ಹೆಂಡತಿ ಆದ ಮೇಲೆ ಮಕ್ಕಳ ಮಾತು. ಈ ಮಕ್ಕಳು ನಮ್ಮ ರಕ್ತಮಾಂಸದಿಂದ ಹುಟ್ಟಿದವರು. ನಾವು ಕೊಟ್ಟ ಎದೆಹಾಲು ಕುಡಿದು, ಅನ್ನ-ರೊಟ್ಟಿ ತಿಂದು ಬೆಳೆದವರು. ನಮ್ಮ ಕಣ್ಣ ಎದುರಿಗೆ, ನಮ್ಮ ಹಾಗೆ ಬೆಳೆದು ನಿಂತವರು. ಆದರೆ ಈ ನಮ್ಮ ಮಕ್ಕಳು ಯಾರು? ಇವರು ನಾವು ಹೇಳಿದ ಹಾಗೆ ಕೇಳಬೇಕಾದ ಗುಲಾಮರೇ? ನಾವು ಹಾಕಿ ಕೊಟ್ಟ ದಾರಿಯಲ್ಲಿ ನಡೆಯಬೇಕಾದ ಗೊಂಬೆಗಳೇ? ನಾವು ಹಾಗೆಯೇ ತಿಳಿಯುತ್ತೇವೆ. ತಂದೆಯ ಮಾತು ಕೇಳಿ, ಹೆಂಡತಿಯನ್ನು ಕಾಡಿಗೆ ಕರೆದುಹೋಗ ಮಗ ರಾಮ ಒಳ್ಳೆಯವನು ಎನ್ನುತ್ತೇವೆ. ಅಣ್ಣನ ಮಾತು ಕೇಳಿ, ಹೆಂಡತಿಯ ಅವಮಾನವನ್ನು ಸಹಿಸಿದ ಪಾಂಡವರು ಒಳ್ಳೆಯವರು ಎನ್ನುತ್ತೇವೆ. ಅದು ನಿಜವೋ ಸುಳ್ಳೋ? ಮಾತು ಕೇಳದ ಮಕ್ಕಳ ಪ್ರೀತಿಯೇ ಸುಳ್ಳೇ? ನಮ್ಮ ಮಗುವಿಗೆ ತೊಂದರೆ ಆಗಬಾರದು ಎಂದು ನಮ್ಮ ಆಸೆ. ಅದಕ್ಕಾಗಿ ಆ ಮಗುವನ್ನು ನಮ್ಮ ಪ್ರೀತಿಯ ಪಂಜರದಲ್ಲಿ ಇಟ್ಟು ಸಾಕಿದರೆ, ಅವರಿಗೆ ನಡಿಗೆ ಬರುವುದು ಯಾವಾಗ? ತಾಯಿ ಮಗುವಿನ ನಡುವಿನ ಹೊಕ್ಕಳುಬಳ್ಳಿಯನ್ನು ಹುಟ್ಟಿದ ಕೂಡಲೇ ಕತ್ತರಿಸುತ್ತೇವೆ. ಆದರೆ ಕಣ್ಣಿಗೆ ಕಾಣದ ಹೊಕ್ಕಳುಬಳ್ಳಿ, ಒಂದು ನಮ್ಮ ನಡುವೆ ಸದಾ ಇರುವುದಲ್ಲ. ಈ ಕರುಳಬಳ್ಳಿ ಒಟ್ಟಿಗೆ ಇರಿಸುವ ಸೇತುವೆಯೋ, ಕಟ್ಟಿ ಹಾಕುವ ಹಗ್ಗವೋ? ಕೋಟಿ ಕೋಟಿ ಜನ ಉತ್ತರ

ಹುಡುಕುತ್ತಿದ್ದೇವೆ. ಚಿಕ್ಕವರಾದಾಗ ಮಕ್ಕಳಾಗಿ ಹುಡುಕುತ್ತೇವೆ. ವಯಸ್ಸಾದ ಮೇಲೆ ತಂದೆ ಆಗಿ, ತಾಯಿ ಆಗಿ ಹುಡುಕುತ್ತೇವೆ.

ಉಳಿದ ನೆಂಟರ, ಗೆಳೆಯರ ಮಾತು ಹೀಗೆಯೇ ಏನೋ? ಯಾವಾಗ ರಕ್ತದ ಸಂಬಂಧ ಗೆಲ್ಲುತ್ತದೆ? ಯಾವಾಗ ಹಣಕಾಸಿನ ಸಂಬಂಧ ಉಳಿಯುತ್ತದೆ? ಉತ್ತರ ತಿಳಿಯದ ಪ್ರಶ್ನೆ. ಬಾಲ್ಯದಲ್ಲಿ ಹಂಚಿಕೊಂಡ ಅನುಭವಗಳು ಪ್ರೀತಿಗೆ ಸಿಮೆಂಟಿನ ಹಾಗೆ ಎನ್ನುತ್ತೇವೆ. ಆದರೆ ಅಣ್ಣತಮ್ಮಂದಿರಾಗಿ ಬೆಳೆದವರು, ಕಾಲಕಳೆದಂತೆ ದಾಯಾದಿಗಳಾಗಿ ಬಿಡುತ್ತೇವೆ. ಪ್ರೀತಿಯ ತಂಪು ಗಾಳಿ ಎಲ್ಲಿ ಹೋಯಿತು? ಬಚ್ಚಿಟ್ಟುಕೊಂಡಿರುತ್ತದೆಯೇ? ನೀನನಗಿದ್ದರೆ, ನಾ ನಿನಗೆ ಎನ್ನುತ್ತದೆಯೇ? ಗೊತ್ತಿಲ್ಲ.

ಆದರೆ ಪ್ರೀತಿ ಎನ್ನುವುದು ಒಂದು ಗಿಡದ ಹಾಗೆ. ಬೀಜ ಬಿತ್ತಿದರೆ ಕೆಲಸ ಮುಗಿಯುವುದಿಲ್ಲ. ಸಿಮೆಂಟಿನ ನೆಲದ ಮೇಲೆ ಬಿದ್ದ ಪ್ರೀತಿಯ ಬೀಜ ಒಡೆದು ಹೋಗುತ್ತದೆ, ಒಣಗಿ ಹೋಗುತ್ತದೆ. ಸರಿಯಾದ ನೆಲದಲ್ಲಿ ಬೀಜ ಸೇರಿತು ಎಂದುಕೊಳ್ಳಿ. ಅಲ್ಲಿಗೆ ಮುಗಿಯಿತೇ. ದಿನದಿನ ಹನಿಹನಿ ನೀರು ಹಾಕಬೇಕು. ಬೀಜ ಒಂದು ಮೊಳಕೆಯಾಗಬಹುದು. ಆಗ ಕಾಗೆಗಳ ಕಾಟ, ಎಲೆ ಒಡೆದರೆ ಹುಳಗಳ ಕಾಟ. ನೀರು ಹಾಕಬೇಕು, ಚಿಗುರು ನೋಡಬೇಕು, ಗಿಡ ಬೆಳೆಯುತ್ತದೆ. ಮರವಾಗುತ್ತದೆ. ಹೂವು, ಹಣ್ಣು ಕೊಡಬಹುದು. ಕೊಡದೆ ಇರಬಹುದು. ನೆರಳು ಬೀಳಬಹುದು, ಜಾಲಿಯ ಮರದಂತೆ ಮುಳ್ಳು ಬೆಳೆಯಬಹುದು. ನೀರೆರೆಯಬೇಕು, ಕಾಯಬೇಕು, ಕಾಯಬೇಕು. ಕೊನೆಗೂ ಹೂವು ಬಂತು, ಹಣ್ಣು ಬಿಟ್ಟಿತು. ಅವು ಬೀಜ ಬಿತ್ತಿದವರಿಗೆ ಸಿಗುತ್ತವೆಯೇ, ನೀರು ಹಾಕಿದವರಿಗೆ? ಅವರು ಈಗಾಗಲೇ ಸತ್ತುಹೋಗಿರಬಹುದು. ನೆರಳಿನ ಕೆಳಗಿನ ಮಣ್ಣು ಆಗಿರಬಹುದು. ಹಾಗಾದರೆ ಬೀಜ ಬಿತ್ತಬಾರದೇ?ನೀರು ಎರೆಯಬಾರದೇ?

ಈಗ ನಾವು ತಿನ್ನುತ್ತಿರುವ ಹಣ್ಣಿನ ಮರದ ಬೀಜ ಬಿತ್ತಿದವರು ಯಾರು. ನಾವು ನಿಂತಿರುವ ಮರದ ನೆರಳು ನಮ್ಮದು. ಅದಕ್ಕೆ ನೀರು ಎರೆದವರು ನಾವಲ್ಲ.

ಹಾಗೆಯೇ ನಮ್ಮ ಪ್ರೀತಿಯ ಬೀಜ ಬಿಡುವ ಹಣ್ಣು, ಕೊಡುವ ನೆರಳು ನಾಳಿನ ನಮ್ಮ ಮಕ್ಕಳ ಸೊತ್ತು.

ಹೀಗೆ ಪ್ರೀತಿಯನ್ನು ಹಂಚುವುದು ಎಂದರೆ ದೀಪವನ್ನು ಬೆಳಗಿದಂತೆ. ಬತ್ತಿ, ಎಣ್ಣೆ, ಹಣತೆ ನಮ್ಮದು, ಬೆಳಕು ಎಲ್ಲರದು. ಕುಟುಂಬದ ಒಳಗಿನವರದು, ಹೊರಗಿನವರದು. ಬೆಳಕನ್ನು ಬಯಸುವ ಎಲ್ಲರದು. ಸುಂದರವಾದ ಕನಸು, ಸ್ವಲ್ಪ ನಿಜವಾದರೆ ಅದೇ ನಮ್ಮ ಭಾಗ್ಯ.

ಎಲ್ಲೋ ಹುಡುಕಿದೆ ಇಲ್ಲದ ದೇವರ !

ಈಗ ಇನ್ನೊಂದು ದೊಡ್ಡ ಹುಡುಕಾಟದ ಬಗ್ಗೆ ಯೋಚನೆ ಮಾಡೋಣ. ಇದು ಸಾವಿರಾರು ವರ್ಷಗಳಿಂದ ನಡೆದಿರುವ ಹುಡುಕಾಟ. 'ದೇವರು' ಎಂಬ ಶಕ್ತಿಯನ್ನು ಹುಡುಕಲು, ಕಂಡುಕೊಳ್ಳಲು ಮಾನವ ಪಟ್ಟಿರುವ ಕಷ್ಟಗಳಿಗೆ ಕೊನೆ ಮೊದಲು ಇಲ್ಲ. ನಮ್ಮನ್ನು, ನಮ್ಮ ಸುತ್ತ ಇರುವ ಈ ಜಗತ್ತನ್ನು ಯಾರೋ ಹುಟ್ಟಿಸಿದ್ದಾರೆ. ಅವರು ಯಾರು ಎಂಬ ಹುಡುಕಾಟ ಇದು. ತೆಂಗಿನಲ್ಲಿ ತಿಳಿನೀರನ್ನು, ಇಂಗಿನಲ್ಲಿ ನಾತವನ್ನು ತುಂಬಿದವರು ಯಾರು? ಎಂದು ಸರ್ವಜ್ಞ ಕೇಳಿದರೆ, ಕಲ್ಲಿನೊಳಗೆ ಹುಟ್ಟಿ ಕೂಗುವ ಕಪ್ಪೆಗಳಿಗೆಲ್ಲ, ಅಲ್ಲಲ್ಲಿಗೆ ಆಹಾರ ಕೊಟ್ಟವರು ಯಾರು? ಎಂದು ಕನಕದಾಸರು ಕೇಳುತ್ತಾರೆ.

ಈ ಪ್ರಶ್ನೆಗೆ ಉತ್ತರ ಸಿಕ್ಕರೆ, ಮನಸ್ಸಿಗೆ ಶಾಂತಿ, ಸಮಾಧಾನ ಸಿಗುತ್ತದೆ ಎಂದು ನಮ್ಮ ನಂಬಿಕೆ. ಯಾರೋ ಕೆಲವರು, ಕಾಡಿಗೆ ಹೋಗಿ, ಮೂಗು ಹಿಡಿದುಕೊಂಡು ತಪಸ್ಸು ಮಾಡಿ, ಉತ್ತರ ಸಿಕ್ಕಿತು ಎಂದು ಹೇಳುತ್ತಾರೆ. ನಮಗೆ ಕಾಡಿಗೆ ಹೋಗಲು ಇಷ್ಟ ಇಲ್ಲ. ತಪಸ್ಸು ಮಾಡುವ ಶಕ್ತಿ ಇಲ್ಲ. ಬೇರೆ ಯಾರೋ ಕೊಟ್ಟ ಉತ್ತರವನ್ನು ನಾವೂ ಒಪ್ಪಿಕೊಳ್ಳುತ್ತೇವೆ. ಅದನ್ನೇ ನಂಬಿಕೆ ಎಂದು ಕರೆಯುತ್ತೇವೆ. ನೀರಿನಲ್ಲಿ ಮುಳುಗುವವನು ಬೆಂಡನ್ನು ಹಿಡಿದುಕೊಳ್ಳುವಂತೆ ನಾವು ಕೂಡ ಈ ನಂಬಿಕೆಗೆ ನೇತುಬೀಳುತ್ತೇವೆ. ಅದು ನಮಗೆ ಸಮಾಧಾನ ಕೊಡುತ್ತಿದೆ ಎಂದುಕೊಳ್ಳುತ್ತೇವೆ. ಆದರೂ ಕಷ್ಟ ಬಂದಾಗ ಅಳುವುದನ್ನು ಬಿಡುವುದಿಲ್ಲ. ಬೇರೆಯವರಿಗೆ ಒಳ್ಳೆಯದು ಆದರೆ ಹೊಟ್ಟೆಕಿಚ್ಚು

ಪಡುವುದನ್ನು ಬಿಡುವುದಿಲ್ಲ. ದೇವರನ್ನು ನಂಬಿದ್ದೇವೆ ಎಂದು ಹೇಳದಿರುವುದಿಲ್ಲ. ಆದರೆ ಸಣ್ಣ ದೊಡ್ಡ ಮೋಸ, ವಂಚನೆ, ತಟವಟಗಳನ್ನು ಮಾಡದೆ ಇರುವುದಿಲ್ಲ. ಎಂದರೆ ಏನಾಯಿತು? ಈ ನಂಬಿಕೆ ನಮ್ಮ ದಿನದ ದಿನ ಜೀವನದಲ್ಲಿ ಯಾವುದೇ ಬದಲಾವಣೆ ಮಾಡುವುದಿಲ್ಲ. ನಮ್ಮ ನೆರೆಮನೆಯವನ ಬಗ್ಗೆ ಪ್ರೀತಿಯ ಹನಿಗಳನ್ನು ಹುಟ್ಟಿಸುವುದಿಲ್ಲ.

ಇಲ್ಲಿ ಇನ್ನೂ ಒಂದು ಮಾತು ಇದೆ. ಪ್ರತಿಯೊಂದು ದೇಶಕ್ಕೂ ಅದರದರದೇ ದೇವರು. ಅಮೆರಿಕಾ ದೇಶದಲ್ಲಿ ಕೋಟಿ ಕೋಟಿ ಜನ ನಮ್ಮ ನಿಮ್ಮ ಹಾಗೆಯೇ ಬದುಕಿದ್ದಾರೆ. ಆದರೆ ಅಲ್ಲಿ ವೆಂಕಟರಮಣಸ್ವಾಮಿ ಇಲ್ಲ, ಸತ್ಯನಾರಾಯಣ ಇಲ್ಲ. ಅಯ್ಯಪ್ಪನಂತೂ ಇಲ್ಲವೇ ಇಲ್ಲ. ಹಾಗಾದರೆ ಅವರೆಲ್ಲರೂ ನೇರವಾಗಿ ನರಕಕ್ಕೆ ಹೋಗುತ್ತಾರೆಯೇ? ಅವರು ಪೂಜಿಸುವ ದೇವರುಗಳ ಹೆಸರನ್ನೂ ಕೇಳದ ನಾವು ಏನಾಗುತ್ತೇವೆ? ಆಫ್ರಿಕಾ ಎಂಬ ದೂರದೇಶದ ಕತ್ತಲು ತುಂಬಿದ ಕಾಡುಗಳಲ್ಲಿ, ಮಣ್ಣು, ಮರದ ಗೊಂಬೆಗಳನ್ನು ಪೂಜೆ ಮಾಡಿಕೊಂಡು ಬದುಕಿದ್ದ ಜನರ ಪಾಡು ಏನಾಗುತ್ತದೆ? ಈ ರೀತಿಯ ಪ್ರಶ್ನೆಗಳಿಗೆ ನಾವು ಉತ್ತರ ಕೊಡುವುದಿಲ್ಲ. ಏಕೆಂದರೆ ತಾನು ಈಗಾಗಲೇ ಎಲ್ಲ ಪ್ರಶ್ನೆಗಳಿಗೂ ಉತ್ತರಕೊಟ್ಟಿದ್ದೇನೆ ಎಂದು ಧರ್ಮಗಳ ನಂಬಿಕೆ. ಅವನ್ನು ಒಪ್ಪುವವರೂ ಹಾಗೆಯೇ ತಿಳಿಯುತ್ತಾರೆ. ಆದರೆ ಸ್ವಲ್ಪ ಯೋಚಿಸಿದಾಗ, ಈ ನಂಬಿಕೆಗಳು ಮರಳಿನ ಮೇಲೆ ಕಟ್ಟಿದ ಮನೆಗಳು ಎಂದು ನಮಗೆ ತಿಳಿಯುತ್ತದೆ.

ಹಾಗಾದರೆ ಈ ದೊಡ್ಡ ಮನುಷ್ಯರು ಸುಳ್ಳು ಹೇಳಿದ್ದಾರೆಯೇ? ಅವರ ಹುಡುಕಾಟದ ಗುರಿಯೇ ಸರಿಯಿಲ್ಲವೇ? ಆ ರೀತಿ ಅಲ್ಲ. ನೀವು ಬುದ್ಧ, ಬಸವ, ಏಸು, ಪೈಗಂಬರ್ ಯಾರ ಬರವಣಿಗೆಯನ್ನು ಬೇಕಾದರೂ ನೋಡಿ. ಅವರು ಪಾಪ-ಪುಣ್ಯಗಳನ್ನು ಕುರಿತು, ಸ್ವರ್ಗ-ನರಕಗಳನ್ನು ಕುರಿತು ಮಾತನಾಡುವುದಿಲ್ಲ. ಅವರು ತಲೆಕೆಡಿಸಿಕೊಂಡಿರುವುದು, ನಾವು ಈ ಲೋಕದಲ್ಲಿ ನಮ್ಮ ಸುತ್ತ ಇರುವ ಜನರ ನಡುವೆ ಹೇಗೆ ಇರಬೇಕು ಎಂಬ ವಿಷಯವನ್ನು ಕುರಿತು, 'ದೇಹವೇ ದೇವಾಲಯ', 'ಒಳ್ಳೆಯ ನಡತೆಯೇ ಸ್ವರ್ಗ, ಕೆಟ್ಟ ನಡತೆಯೇ ನರಕ' ಎಂದು ಹೇಳಿದ ಬಸವಣ್ಣನವರು

ಇದಕ್ಕೆ ಸಾಕ್ಷಿ ಅಲ್ಲವೆ? ಬೇರೆ ಬೇರೆ ದೇಶದ ಜನರು ತಮ್ಮ ತಮ್ಮ ದೇವರನ್ನು ಹುಟ್ಟಿಸಿಕೊಂಡಿದ್ದು ಇದಕ್ಕಾಗಿಯೇ.

ದೇವರು ಎಂದರೆ ಪೊಲೀಸಿನವರಲ್ಲ. ಅವರನ್ನು ನಂಬದಿದ್ದರೆ ನಮ್ಮ ನಡತೆಯಲ್ಲಿ ಯಾವ ಬದಲಾವಣೆಯೂ ಆಗುವುದಿಲ್ಲ. ನಂಬಿಕೆ ಇಲ್ಲದಿರುವಾಗ ಇದೆ



ದೇವರನ್ನು ಹುಡುಕುವುದು

ಎಂದು ಸುಳ್ಳು ಹೇಳಿದರೂ ಏನೂ ಆಗುವುದಿಲ್ಲ. ನಿಜವಾಗಿಯೂ ನಂಬಿದವರು ನೀತಿವಂತರಾಗುತ್ತಾರೆಯೇ? ಅದನ್ನು ಹೇಳುವುದು ಕಷ್ಟ. ನಮ್ಮ ದೇಶದಲ್ಲಿ ದೇವರನ್ನು ನಂಬದವರು ತಮ್ಮಂತಹ ಮನುಷ್ಯರನ್ನೇ ಮುಟ್ಟುತ್ತಿರಲಿಲ್ಲ ಎಂದು ನಮಗೆ ಗೊತ್ತು. ಭಕ್ತಿ ಬೇರೆ, ಆಡಂಬರ ಬೇರೆ ಎಂದೂ ನಮಗೆ ಗೊತ್ತು. ದಿನ ಕಳೆದಂತೆ ದೇವರನ್ನು ನಂಬುವುದು, ಗುಡಿಗೆ ಹೋಗುವುದು ಅರ್ಥವಿಲ್ಲದ ಆಚರಣೆ ಆಗುತ್ತಿದೆಯೇ? ನಂಬುವವನು ಒಬ್ಬ, ನಂಬದವರು ಸಾವಿರ ಎಂದು ಆದಾಗ, ಈ ಹುಡುಕಾಟ ನಮ್ಮನ್ನು ಎಲ್ಲಿಗೆ ಕರೆದುಕೊಂಡು ಹೋಗುತ್ತದೆ?

ನಮ್ಮ ಸಂತರು ಬದುಕಿದ ರೀತಿಯನ್ನು ಕುರಿತು ಯೋಚನೆ ಮಾಡಿ. ಕಬೀರ, ತುಳಸೀದಾಸ, ಚೈತನ್ಯ, ಬಸವ ಎಲ್ಲರೂ ಅಷ್ಟೆ. ಅವರು ಜಾತಿಯನ್ನು ನಂಬಲಿಲ್ಲ. ಮಡಿ-ಮೈಲಿಗೆ ನಂಬಲಿಲ್ಲ. ಗಂಡು ಮೇಲು, ಹೆಣ್ಣು ಕೀಳು ಎನ್ನಲಿಲ್ಲ. ಬಡವನನ್ನು ತಿರಸ್ಕಾರದಿಂದ ಕಾಣಲಿಲ್ಲ. ಶ್ರೀಮಂತರಿಗೆ ಸಲಾಮು ಹೊಡೆಯಲಿಲ್ಲ. ಉತ್ತಮ ಕುಲದಲ್ಲಿ ಹುಟ್ಟಿದೆನೆನ್ನುವುದು ಕಷ್ಟ ಎಂದರು ಬಸವಣ್ಣನವರು, ಜಾತಿಹೀನನ ಮನೆಯಲ್ಲಿ ಬೆಳಕು ಮಂಕಾಗಿ ಉರಿಯುತ್ತದೆಯೇ ಎಂದು ಕೇಳಿದ, ಸರ್ವಜ್ಞ, ಈ ರೀತಿಯ ಮಾತುಗಳ ಹಿಂದೆ ಎಲ್ಲ ಮನುಷ್ಯರೂ ಸಮಾನರು ಎಂಬ ನಂಬಿಕೆ ಇದೆ. ಅಷ್ಟೇ ಅಲ್ಲ ಎಲ್ಲ ದೇವರೂ ಸಮಾನರು, ಪೂಜೆಗೆ ಸರಿಯಾದವರು ಎಂಬ ನಂಬಿಕೆಯೂ ಇದೆ.

ಆದ್ದರಿಂದ ಎಲ್ಲ ಮನುಷ್ಯರನ್ನೂ ಒಳ್ಳೆಯವರನ್ನಾಗಿ ಮಾಡುವುದು ದೇವರ ಹುಡುಕಾಟದ ನಿಜವಾದ ಗುರಿ. ಈ ಗುರಿಯನ್ನು ತಲುಪುವುದು ಯಾವ ಹಿರಿಯರಿಗೂ ಆಗಲಿಲ್ಲ. ಏಕೆಂದರೆ ನಮ್ಮ ಮನಸ್ಸು ನಾಯಿಯ ಬಾಲದ ಹಾಗೆ ಡೊಂಕು. ಆದರೆ ಸರಿಯಾದ ದಾರಿಯಲ್ಲಿ ಕರೆದುಕೊಂಡು ಹೋಗುವ ಕೆಲಸವೇ ತಪ್ಪು ಅಲ್ಲವಲ್ಲ.

ದೇವರುಗಳ ನಡುವೆ ಯುದ್ಧ ಆಗದಂತೆ, ಇರುವ, ಪ್ರೀತಿ ತುಂಬಿದ ಕಾಲಕ್ಕಾಗಿ ನಾವು ಹಂಬಲ ಪಡಬೇಕು. ಅದನ್ನು ನಿಜ ಮಾಡಲು ಕಷ್ಟಪಡಬೇಕು.

ಪ್ರೀತಿ ಬೇಕು, ಗೆಳೆತನ ಬೇಕು

ಕೊನೆಯದಾಗಿ ನಾನು ಹೇಳುವ ಹುಡುಕಾಟ, ಉರಿಯುತ್ತಿರುವ ಮನೆಗೆ ನೀರು ಸುರಿದು ಬೆಂಕಿ ಆರಿಸುವವರ ಹುಡುಕಾಟ. ಒಂದು ತುತ್ತು ಅನ್ನವೂ ಇಲ್ಲದ ಬಡಮಗುವಿನ ಪರವಾಗಿ ಭಿಕ್ಷೆ, ಬೇಡುತ್ತಾ ತಿರುಗುವವರ ಹುಡುಕಾಟ. ನಮ್ಮ ದೇಶದ ತಂದೆ ಗಾಂಧೀಜಿ ಈ ರೀತಿಯ ಹುಡುಕಾಟ ನಡೆಸಿದರು. ನಮ್ಮ ದೇಶದ ತಾಯಿ ಥೆರೇಸಾ, ಮುಪ್ಪು ತುಂಬಿದ ದೇಹದೊಂದಿಗೆ ಈ ಹುಡುಕಾಟ ನಡೆಸುತ್ತಿದ್ದಾರೆ. ಅವರು ಹುಡುಕುತ್ತಿರುವುದು ಬೇರೆ ಎಲ್ಲೋ ಅಲ್ಲ. ನಮ್ಮ-ನಿಮ್ಮ ಹೃದಯಗಳಲ್ಲಿ ಅವರ ಹುಡುಕಾಟ ನಡೆದಿದೆ. ಕಷ್ಟದಲ್ಲಿರುವವರ ಕಣ್ಣೀರನ್ನು ಒರೆಸುವ ಕೈಗಳು ಎಲ್ಲಿವೆ ಎಂದು ಅವರು ಹುಡುಕುತ್ತಿದ್ದಾರೆ. ಅನ್ಯಾಯದ ಎದುರಾಗಿ ಹೆದರದೆ ಮಾತನಾಡುವ ನಾಲಗೆ ಎಲ್ಲಿದೆ ಎಂದು ಅವರು ಹುಡುಕುತ್ತಿದ್ದಾರೆ. ಅವರಿಗಂತೂ ಯಾರ ಭಯವೂ ಇಲ್ಲ.

ಕುಷ್ಠರೋಗಿಗಳನ್ನು ಮುಟ್ಟಿ ಮೈದಡವುವ ಈ ಮುದುಕಿ ಥೆರೇಸಾ ಏನನ್ನು ಬಯಸುತ್ತಾಳೆ? ಇಪ್ಪತ್ತೆಂಟು ವರ್ಷ ಕತ್ತಲ ಮನೆಯಲ್ಲಿ ಕಳೆದುಹೊರಗೆ, ಬಂದ ಕೂಡಲೇ ಮೊದಲಿನಂತೆಯೇ ಹೋರಾಟ ನಡೆಸುತ್ತಿರುವ 'ನೆಲ್ಸನ್' ಮಂಡೇಲಾ ಏನು ಹುಡುಕುತ್ತಿದ್ದಾರೆ? ತಾನು ನಂಬಿದ ಸತ್ಯಕ್ಕಾಗಿ ವಿಷ ಕುಡಿದ 'ಸಾಕ್ರೆಟಿಸ್', ಶಿಲುಬೆಗೇರಿದ, 'ಏಸು' ಏನು ಹುಡುಕಿದರು?

ನಾವು, ಹೌದು. ನಾವು ಈಗ ಏನು ಹುಡುಕುತ್ತಿದ್ದೇವೆ? ನಮ್ಮ ಗುರಿ ಯಾವುದು? ದಾರಿ ಯಾವುದು? ಈ ಮಾತುಗಳಿಗೆ ಉತ್ತರವನ್ನು ಮೊದಲು ಹುಡುಕಬೇಕು? ಆಮೇಲೆ ಹುಡುಕಾಟ ಮೊದಲಾಗಬೇಕು.

ಗೆಳೆಯರೇ, ನೀವು ಹೊಸದಾಗಿ ಕಲಿತಿರುವ ಅಕ್ಷರ ಎಂಬ ಬೆಳಕು ಈ ಹುಡುಕಾಟದಲ್ಲಿ ನಿಮಗೆ ನೆರವು ನೀಡಬಹುದೇ? ಇಲ್ಲವೇ? ದಯವಿಟ್ಟು ಯೋಚನೆ ಮಾಡಿ.

ಕನ್ನಡ ವಿಶ್ವವಿದ್ಯಾಲಯವು ನವಸಾಕ್ಷರರಿಗೆ ಮತ್ತು ಪ್ರಾಥಮಿಕ ಹಂತದಿಂದ ಪದವಿ ಮಟ್ಟದವರೆಗೆ ಉತ್ತಮ ಹಾಗೂ ಉಪಯುಕ್ತವಾದ ಪಠ್ಯಪುಸ್ತಕಗಳನ್ನು ನಿರ್ಮಾಣ ಮಾಡುವ ಸಲುವಾಗಿ 'ಪಠ್ಯಪುಸ್ತಕ ರಚನಾ ವಿಭಾಗ'ವನ್ನು ತೆರೆದಿದೆ. ಇದರ ಮೊದಲ ಪ್ರಯತ್ನವಾಗಿ ನವಸಾಕ್ಷರರಿಗಾಗಿ ಪಠ್ಯಪುಸ್ತಕ ರಚನೆ ಮಾಡಬೇಕೆಂದು ಚಿಂತಿಸುತ್ತಿರುವಾಗ ಬೆಂಬಲಕ್ಕೆ ಬಂದುದು ಲೋಕ ಶಿಕ್ಷಣ ಇಲಾಖೆ: ನವಸಾಕ್ಷರರಿಗಾಗಿ ಪುಸ್ತಕ ಬರೆಸುವ ತಮ್ಮಲ್ಲಿದ್ದ ಯೋಜನೆಯನ್ನು ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ವಹಿಸಿಕೊಟ್ಟರು. ವಿಶ್ವವಿದ್ಯಾಲಯವು ಈ ಯೋಜನೆಯನ್ನು ಸಂತಸದಿಂದ ಸ್ವೀಕರಿಸಿ, ಕೂಡಲೇ ನಾಡಿನ ಪ್ರಖ್ಯಾತ ಲೇಖಕರನ್ನು, ಭಾಷಾತಜ್ಞರನ್ನು, ಶಿಕ್ಷಣತಜ್ಞರನ್ನು ಒಳಗೊಂಡಂತೆ ಸಲಹಾ ಸಮಿತಿಯನ್ನು ರಚಿಸಿ, ಅವರೆಲ್ಲರ ಅಭಿಪ್ರಾಯ, ಸಲಹೆ, ಸಹಕಾರಗಳನ್ನು ಕೇಳಿ ಕಾರ್ಯೋನ್ಮುಖವಾಯಿತು. ಪುಸ್ತಕಗಳ ವಸ್ತು, ಭಾಷೆ, ಮುದ್ರಣ ವಿನ್ಯಾಸ, ಚಿತ್ರಗಳ ಮಹತ್ವ, ಸಾಹಿತ್ಯಕ ಗುಣಮಟ್ಟ ಇತ್ಯಾದಿಗಳನ್ನು ಕುರಿತು ಸಮಿತಿಯು ಅನೇಕ ಸಲ ಚರ್ಚಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲು ಸೂಚಿಸಿತು.

ನವಸಾಕ್ಷರರಿಗಾಗಿ ಕನ್ನಡದಲ್ಲಿ ಹಾಗೂ ದೇಶದ ಇತರ ಭಾಷೆಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಪುಸ್ತಕಗಳನ್ನೆಲ್ಲ ಒಟ್ಟುಗೂಡಿಸಿ, ಅವುಗಳ ಮಾದರಿ, ಮಾಹಿತಿಗಳನ್ನೆಲ್ಲ ಭಾಷಾತಜ್ಞರಿಂದ ಪರಿಶೀಲಿಸಲಾಯಿತು. ಜೊತೆಗೆ ಈ ಕ್ಷೇತ್ರದ ಅನುಭವಿ ಕ್ಷೇತ್ರಸಹಾಯಕರನ್ನು ನೇಮಿಸಿಕೊಂಡು ಅವರಿಗೆ ಕಮ್ಮಟಗಳನ್ನು ನಡೆಸಿ, ಪ್ರಶ್ನಾವಳಿ ತಯಾರಿಸಿಕೊಟ್ಟು, ಅವರನ್ನು ರಾಜ್ಯದಾದ್ಯಂತ ಆಯ್ದ ಜಿಲ್ಲೆ, ತಾಲೂಕುಗಳಿಗೆ ಕಳುಹಿಸಿ ಈ ಆಂದೋಲನದಲ್ಲಿ ಕಲಿತವರಿಂದ ಮತ್ತು ಕಲಿಯುತ್ತಿರುವವರಿಂದ ಅದರ ಗುಣದೋಷಗಳ ಬಗ್ಗೆ ಅಭಿಪ್ರಾಯ ಸಲಹೆಗಳನ್ನು ಸಂಗ್ರಹಿಸಿ, ಅನಂತರ ಅವುಗಳನ್ನೆಲ್ಲ ವಿಶ್ವವಿದ್ಯಾಲಯದ ಗಣಕಯಂತ್ರದಲ್ಲಿ ವಿಶ್ಲೇಷಿಸಲಾಯಿತು; ಮತ್ತೆ ಮತ್ತೆ ಕ್ಷೇತ್ರಗಳಿಗೆ ಹೋಗಿ, ಕ್ಷೇತ್ರ ಸಹಾಯಕರು ನೀಡಿದ್ದ ಮಾಹಿತಿಗಳನ್ನೆಲ್ಲ ಮರು ಪರಿಶೀಲನೆ ಮಾಡಿ, ನಂತರ ನವಸಾಕ್ಷರರ ಅಪೇಕ್ಷೆಗೆ ಅನುಗುಣವಾಗಿ ವಿಷಯದ ಆದ್ಯತೆಗಳನ್ನು ನಿರ್ಧರಿಸಿಕೊಂಡು ಪುಸ್ತಕ ರಚನೆಗೆ ತೊಡಗಲಾಯಿತು; ಪ್ರಖ್ಯಾತ ಲೇಖಕರು ನಮ್ಮ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಜೊತೆ ಚರ್ಚಿಸಿ ತಮ್ಮ ಹಸ್ತಪ್ರತಿಗಳಿಗೆ ಅಂತಿಮ ರೂಪ ಕೊಟ್ಟರು. ಕಲಾವಿದರು ವಿಷಯಗಳಿಗೊಪ್ಪುವ ಚಿತ್ರಗಳನ್ನು ಬರೆದುಕೊಟ್ಟರು. ಹೀಗೆ ಸಿದ್ಧಗೊಂಡ ಹಸ್ತಪ್ರತಿಗಳನ್ನು ನವಸಾಕ್ಷರರ ಬಳಿ ಕೊಂಡೊಯ್ದು ಅವರ ಮುಂದೆ ಪಠಿಸಿ ನಂತರ ಅವರ ಅಭಿಪ್ರಾಯ, ಪ್ರತಿಕ್ರಿಯೆಗಳನ್ನು ಅಳವಡಿಸಿ ಹಸ್ತಪ್ರತಿಯನ್ನು ಅಂತಿಮಗೊಳಿಸಲಾಯಿತು.

ನಮ್ಮ ಬಹುಸಂಖ್ಯಾತ ಸಮುದಾಯ ಅನಕ್ಷರಸ್ಥರೇ ಹೊರತು ಅವಿದ್ಯಾವಂತರಲ್ಲ. ನೃಪತುಂಗ ಹೇಳುವಂತೆ ಅವರು "ಚದುರರ್ ನಿಜದಿಂ ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತ ಮತಿಗಳ್". ಅನುಭವದಲ್ಲಿ, ವಿವೇಕದಲ್ಲಿ, ವ್ಯವಹಾರದಲ್ಲಿ, ತಿಳುವಳಿಕೆಯಲ್ಲಿ ಆ ಜನ ಚದುರರು. ಹೀಗೆಂದು ಅವರನ್ನು ಅಕ್ಷರದಲಿತರನ್ನಾಗಿಯೂ ಉಳಿಸುವಂತಿಲ್ಲ. ಅವರಲ್ಲಿ ಅಕ್ಷರ ಕಲಿಯುವ ಸಾಮರ್ಥ್ಯವಿದೆ. ಕಲಿಸುವ ಹೊಣೆ ಸರ್ಕಾರಗಳ, ವಿಶ್ವವಿದ್ಯಾಲಯಗಳ ಮೇಲಿದೆ. ಈ ನಿಟ್ಟಿನಲ್ಲಿ ದೇಶದಾದ್ಯಂತ ಸಾಕ್ಷರತಾ ಆಂದೋಲನ ನಡೆಯುತ್ತಿದೆ. ಆದರೆ ಈ ಅಕ್ಷರ ಸಂಸ್ಕೃತಿಯ ಆಂದೋಲನದಲ್ಲಿ ಕಲಿತವರಿಗೆ ಮತ್ತು ಕಲಿಯುವವರಿಗೆ ಉತ್ತಮ ಗುಣಮಟ್ಟದ ಪುಸ್ತಕಗಳ ಅವಶ್ಯಕತೆ ಇದೆ. ಕಲಿತವರು ಮರೆಯದಂತೆ, ಕಲಿಕೆಯನ್ನು ಮುಂದುವರಿಸುವಂತೆ ನೋಡಿಕೊಳ್ಳುವುದು ಎಲ್ಲರ ಕರ್ತವ್ಯ.

ಕನ್ನಡ ವಿಶ್ವವಿದ್ಯಾಲಯವು ನಾಡಿನ ಹಲವು ವಿದ್ವಾಂಸರೊಂದಿಗೆ ಸೇರಿ ನಡೆಸಿದ ಒಂದು ಸಾಮೂಹಿಕ ಪ್ರಯತ್ನದ ಫಲವಾಗಿ ಈ ಪುಸ್ತಕ ರೂಪತಾಳಿದೆ. ನವಸಾಕ್ಷರರು ಈ ಪುಸ್ತಕವನ್ನು ಪ್ರೀತಿಯಿಂದ ಸ್ವೀಕರಿಸುತ್ತಾರೆಂದು ನಂಬಿದ್ದೇವೆ. ಈ ಯೋಜನೆಯ ಯಶಸ್ಸಿಗೆ ಕಾರಣರಾಗಿರುವ ಉನ್ನತ ಸಲಹಾ ಸಮಿತಿ ಹಾಗೂ ಸಂಪಾದಕ ಸಮಿತಿಯ ಸದಸ್ಯರಿಗೆ, ಲೇಖಕರಿಗೆ, ಕಲಾವಿದರಿಗೆ ಹಾಗೂ ಈ ಯೋಜನೆಯಲ್ಲಿ ಪ್ರತ್ಯಕ್ಷವಾಗಿ, ಪರೋಕ್ಷವಾಗಿ ನಮ್ಮೊಡನೆ ಪಾಲ್ಗೊಂಡವರೆಲ್ಲರಿಗೂ ನಮ್ಮ ಹೃತ್ಪೂರ್ವಕವಾದ ವಂದನೆಗಳು. ನಮ್ಮ ವಿಶ್ವವಿದ್ಯಾಲಯದ ಮೇಲೆ ವಿಶ್ವಾಸವಿಟ್ಟು ಇಂತಹ ಒಂದು ಗುರುತರವಾದ ಯೋಜನೆಯನ್ನು ವಹಿಸಿಕೊಟ್ಟ ಲೋಕಶಿಕ್ಷಣ ಇಲಾಖೆಯ ನಿರ್ದೇಶಕರಾದ ಶ್ರೀ ಲೂಕೋಸ್ ವಲ್ಲತ್ತರೈ ಅವರಿಗೆ ನನ್ನ ಕೃತಜ್ಞತೆಗಳು. ಓದುಗರು ಈ ಪುಸ್ತಕದ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಿದರೆ ನಮ್ಮ ಪಠ್ಯಪುಸ್ತಕ ರಚನೆಗೆ ಉಪಯೋಗವಾಗುತ್ತದೆ.

ಚಂದ್ರಶೇಖರ ಕಂಬಾರ
ಕುಲಪತಿಗಳು